ಕರ್ನಾಟಕ ಸರ್ಕಾರ

# ಸವಿ ಕನ್ನಡ

## ಅಭ್ಯಾಸ ಸಹಿತ ಪಠ್ಯಪುಸ್ತಕ

## ಭಾಗ–2

೩

## ಮೂರನೆಯ ತರಗತಿ

@KTBS NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪರಿವಿಡಿ

F7A7V1


| ಸಂಖ್ಯೆ | ಗದ್ಯ – ಪದ್ಯಗಳು | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೯. | ಭಗೀರಥ | ಸಮಿತಿ ರಚನೆ | ೦೧ |
| ೧೦. | ಮೃಗಾಲಯದಲ್ಲಿ ಒಂದು ದಿನ | ಸಮಿತಿ ರಚನೆ | ೦೭ |
| ೧೧. | ಜಾತ್ರೆ | ಸಮಿತಿ ರಚನೆ | ೧೭ |
| ೧೨. | ಅನಾರೋಗ್ಯದ ಸಿಂಹ (ಪದ್ಯ) | ಅರುಣ ನರೇಂದ್ರ ಪಾಟೀಲ | ೨೪ |
| ೧೩. | ಹೊಯ್ಸಳ | ಸಮಿತಿ ರಚನೆ | ೩೦ |
| ೧೪. | ರಾಜನ ಸುಪ್ರಭಾತ (ಪದ್ಯ) | ಕೆ.ವಿ. ತಿರುಮಲೇಶ್ | ೩೭ |
| ೧೫. | ಆಡೋಣ ಬಾ | ಸಮಿತಿ ರಚನೆ | ೪೨ |
| ೧೬. | ಮುಳುಗದ ಸೂರ್ಯ (ಪದ್ಯ) | ಪ.ಗು. ಸಿದ್ದಾಪುರ | ೫೦ |


@KTBS NOT TO BE REPUBLISHED

# ಪಾಠ ೬ ಭಗೀರಥ

– ಸಮಿತಿ ರಚನೆ

E1D1F4

**ಸಾಮರ್ಥ್ಯ :** ಸರಳ ಕಥೆ ಪುಸ್ತಕ ಹಾಗೂ ಮಕ್ಕಳ ಪುಸ್ತಕಗಳನ್ನು ಓದುವುದು.

**ಪ್ರವೇಶ :** ಕಥೆಗಳೆಂದರೆ ಎಲ್ಲರಿಗೂ ಇಷ್ಟ. ನೀನೂ ಹಲವಾರು ಕಥೆಗಳನ್ನು ಕೇಳಿರಬಹುದು. ಅಂತೆಯೇ ಇತರರಿಗೆ ಹೇಳಿರಬಹುದು. ಕಥೆಗಳು ಓದುಗ ಅಥವಾ ಕೇಳುಗರಿಗೆ ಸಂತೋಷದ ಜೊತೆಗೆ ಅಚ್ಚರಿಯನ್ನುಂಟು ಮಾಡುತ್ತವೆ. ಈ ಕಥೆಯನ್ನು ಗಮನಿಸು. ಇದನ್ನು ನಿನ್ನ ಗೆಳೆಯರಿಗೂ ಹೇಳು.

ಪುರಾಣಕಾಲದಲ್ಲಿ ಭಗೀರಥ ಎಂಬ ದೊರೆ ಇದ್ದನು. ಅವನ ಅರವತ್ತು ಸಾವಿರ ಜನ ತಾತಂದಿರು ಕಪಿಲ ಮುನಿಯ ಕೋಪಕ್ಕೆ ಸಿಕ್ಕಿ ಸುಟ್ಟು ಭಸ್ಮವಾಗಿದ್ದರು. ಅವರಿಗೆ ಸ್ವರ್ಗ ಲಭಿಸಬೇಕೆಂದು ಭಗೀರಥನು ಚಿಂತಿಸುತ್ತಿದ್ದನು. ಅದಕ್ಕೆ ದೇವಲೋಕದ ಗಂಗೆಯನ್ನು ಭೂಮಿಗೆ ತಂದು, ಅವನ ತಾತಂದಿರ ಬೂದಿಯ ಮೇಲೆ ಹರಿಸಬೇಕೆಂದು ಜ್ಞಾನಿಗಳಾದ ಋಷಿಗಳು ಹೇಳಿದರು.

©KTBS NOT TO BE REPUBLISHED



ದೇವಲೋಕದ ಗಂಗೆಯನ್ನು ಭೂಮಿಗೆ ತರುವುದು ಅಸಾಧ್ಯವಾದ ಕೆಲಸವಾಗಿತ್ತು. ಆದರೆ ಭಗೀರಥ ತನ್ನ ನಿರ್ಧಾರದಿಂದ ಎಳ್ಳಷ್ಟು ಹಿಂದೆ ಸರಿಯಲಿಲ್ಲ. ಎಷ್ಟೇ ಕಷ್ಟವಾದರೂ

ಗಂಗೆಯನ್ನು ಭೂಮಿಗೆ ತಂದೇ ತರುತ್ತೇನೆಂದು ತಪಸ್ಸಿಗೆ ಕುಳಿತ. ಬಾಯಾರಿಕೆ, ಹಸಿವು, ನಿದ್ರೆಯನ್ನು ಮರೆತ. ಬಿಸಿಲು, ಮಳೆ, ಬಿರುಗಾಳಿಯನ್ನು ಸಹಿಸಿಕೊಂಡ.

ಅನೇಕ ವರ್ಷಗಳ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದ ಗಂಗೆ "ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ. ಆದರೆ, ನನ್ನ ರಭಸವನ್ನು ತಡೆಯುವವರು ಯಾರು?" ಎಂದಳು.

ಚಿಂತಾಕ್ರಾಂತನಾದ ಭಗೀರಥ ಮತ್ತೆ ತಪಸ್ಸಿಗೆ ಕುಳಿತ. ಆಗ ಅವನಿಗೆ ಬ್ರಹ್ಮದೇವ ಪ್ರತ್ಯಕ್ಷನಾದ. ಭಗೀರಥನ ಪ್ರಾರ್ಥನೆಗೆ ಬ್ರಹ್ಮದೇವನು ಮೆಚ್ಚಿ, ಶಿವನನ್ನು ಕುರಿತು ತಪಸ್ಸು ಮಾಡು ಎಂದು ಸಲಹೆ ನೀಡಿದ. ಅದರಂತೆ ಭಗೀರಥ ತಪಸ್ಸನ್ನು ಮುಂದುವರಿಸಿದ. ಅವನ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಶಿವ "ನಿನ್ನ ಧೈರ್ಯ, ಭಕ್ತಿ, ದೃಢಸಂಕಲ್ಪವನ್ನು ಮೆಚ್ಚಿದ್ದೇನೆ. ಧುಮ್ಮಿಕ್ಕುವ ಗಂಗೆಯನ್ನು ತಡೆದು ನಾನು ಶಿರದಲ್ಲಿ ಧರಿಸುತ್ತೇನೆ. ಗಂಗೆ ನನ್ನ ಶಿರದಿಂದ ಭೂಮಿಗೆ ಇಳಿದು, ನಿನ್ನನ್ನು ಹಿಂಬಾಲಿಸುವಳು" ಎಂದನು.

ಅಂತೆಯೇ ಭೋರ್ಗರೆಯುತ್ತ ಧುಮ್ಮಿಕ್ಕಿದ ಗಂಗೆಯನ್ನು ಶಿವನು ಜಟೆಯಲ್ಲಿ ತಡೆದು ಭೂಮಿಗೆ ಹರಿಯಬಿಟ್ಟನು. ಗಂಗೆ ರಭಸದಿಂದ ಹರಿಯುವಾಗ ಜಹ್ನು ಮಹರ್ಷಿಯ ಆಶ್ರಮ ಕೊಚ್ಚಿಕೊಂಡು ಹೋಯಿತು. ಇದರಿಂದ ಕೋಪಗೊಂಡ ಮಹರ್ಷಿಯು ಗಂಗೆಯನ್ನು ಒಂದೇ ಗುಟುಕಿಗೆ ಕುಡಿದು ಬಿಟ್ಟನು.

@KTBS NOT TO BE REPUBLISHED

ಇಷ್ಟೆಲ್ಲಾ ಪ್ರಯತ್ನಗಳ ನಂತರವೂ ಗಂಗೆ ಸಿಗಲಿಲ್ಲ. ಆದರೂ ಭಗೀರಥ ಎದೆಗುಂದದೆ, ಜಹ್ನು ಮಹರ್ಷಿಯನ್ನು ತನ್ನ ಪ್ರಾರ್ಥನೆಯಿಂದ ಮೆಚ್ಚಿಸಿದ. ತನ್ನ ಪಿತೃಗಳ ಸದ್ಗತಿಗಾಗಿ ಭಗೀರಥ ಮಾಡುತ್ತಿರುವ ಪ್ರಯತ್ನವನ್ನು ಮೆಚ್ಚಿ ಮಹರ್ಷಿ, ಗಂಗೆಯನ್ನು ತನ್ನ ಕಿವಿಯಿಂದ ಹರಿಯಲು ಬಿಟ್ಟನು.

ಅಂತೂ ಭಗೀರಥ ಗಂಗೆಯನ್ನು ಭೂಮಿಗೆ ತರಲು ಮಾಡಿದ ಸಾಹಸಕ್ಕೆ ಫಲ ದೊರೆಯಿತು. ಭಗೀರಥನ ಪ್ರಾರ್ಥನೆಯನ್ನು ಮನ್ನಿಸಿ ಹಿಂಬಾಲಿಸಿದ ಗಂಗೆ ಹರಿದು ಅವನ ತಾತಂದಿರ ಬೂದಿಯನ್ನು ತೊಯ್ದಳು. ಅವರಿಗೆ ಸ್ವರ್ಗ ಲಭಿಸಿತು. ಎಷ್ಟೇ ಅಡ್ಡಿ ಆತಂಕಗಳು ಬಂದರೂ, ಭಗೀರಥ ಎದೆಗುಂದದೆ ತನ್ನ ದೃಢಸಂಕಲ್ಪದಿಂದ ಅಂದುಕೊಂಡ ಕಾರ್ಯ ಸಾಧಿಸಿದ.

## ಪದಗಳ ಅರ್ಥ

ಕೋಪ–ಸಿಟ್ಟು; ಮೆಚ್ಚು–ಇಷ್ಟಪಡು; ಇಚ್ಛೆ–ಅಪೇಕ್ಷೆ, ಬಯಕೆ; ಚಿಂತಾಕ್ರಾಂತ–ಯೋಚನೆಗೆ ಒಳಗಾದ; ಧುಮುಕು–ಕೆಳಗೆ ಹಾರು, ಜಿಗಿ; ಪ್ರತ್ಯಕ್ಷ–ಕಾಣಿಸಿಕೋ; ತೊಯ್ಯು–ನೆನೆ, ಒದ್ದೆಯಾಗು; ಎದೆಗುಂದು–ಧೈರ್ಯಗೆಡು.

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ಭಗೀರಥ ಯಾರಿಗೆ ಸ್ವರ್ಗ ಸಿಗಬೇಕೆಂದು ಚಿಂತಿಸುತ್ತಿದ್ದನು?

______________________________

೨. ಋಷಿಗಳು ಭಗೀರಥನಿಗೆ ಏನೆಂದು ಹೇಳಿದರು?

______________________________

೩. ಭಗೀರಥನು ಏಕೆ ತಪಸ್ಸಿಗೆ ಕುಳಿತನು?

______________________________

೪. ಗಂಗೆ ಭಗೀರಥನಿಗೆ ಏನೆಂದು ಹೇಳಿದಳು?

______________________________

೫. ಗಂಗೆ ಹರಿಯುವ ರಭಸವನ್ನು ತಡೆದವರು ಯಾರು?

______________________________

@KTBS NOT TO BE REPUBLISHED

### ಆ) 'ಅ' ಪಟ್ಟಿಯಲ್ಲಿನ ಹೆಸರುಗಳನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆ.

| ಅ | ಬ | |
|---|---|---|
| ೧. ಗಂಗೆ | ಅ. ದೊರೆ | ________ |
| ೨. ಜಹ್ನು | ಬ. ನದಿ | ________ |
| ೩. ಭಗೀರಥ | ಕ. ಮಹರ್ಷಿ | ________ |

ಇ) ಈ ಕೆಳಗಿನ ಘಟನೆಗಳನ್ನು ಕೊಟ್ಟಿರುವ ಸ್ಥಳದಲ್ಲಿ ಅನುಕ್ರಮವಾಗಿ ಬರೆ.

೧. ಗಂಗೆ ಭೂಮಿಗೆ ಧುಮ್ಮಿಕ್ಕಿ ಹರಿದು ಬಂದಳು.

೨. ಶಿವನು ಗಂಗೆಯನ್ನು ಶಿರದಲ್ಲಿ ಧರಿಸಿದ.

೩. ಗಂಗೆಯನ್ನು ಭೂಮಿಗೆ ತರಲೇಬೇಕೆಂದು ಭಗೀರಥ ತಪಸ್ಸು ಮಾಡಿದ.

೪. ಜಹ್ನು ಮಹರ್ಷಿ ಗಂಗೆಯನ್ನು ಕಿವಿಯ ಮೂಲಕ ಹರಿಯಲು ಬಿಟ್ಟನು.

______________________________

______________________________

______________________________

______________________________

ಈ) ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ಹೇಳಿದರು?

೧. "ಗಂಗೆಯನ್ನು ನಾನು ಶಿರದಲ್ಲಿ ಧರಿಸುತ್ತೇನೆ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

©KTBS NOT TO BE REPUBLISHED

೨. "ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

## ಭಾಷಾ ಚಟುವಟಿಕೆ

ಅ) ಈ ಪದಗಳಿಗೆ ನಾನಾರ್ಥಗಳನ್ನು ಬರೆ.

೧. ಮುನಿ – ____________ ____________

೨. ತರು – ____________ ____________

ಆ) ಈ ನುಡಿಗಟ್ಟುಗಳನ್ನು ನಿನ್ನ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆ.

೧. ಎಳ್ಳಷ್ಟು – ______________________________

೨. ಎದೆಗುಂದು – ______________________________

ಇ) ಈ ಪದಗಳನ್ನು ಸರಿಪಡಿಸಿ ಬರೆದು ಓದು.

೧. ತಂತಾದಿರು : ______________

೨. ರಭಶ : ______________

೩. ಜ್ಙಾನಿ : ______________

೪. ಅಸಾದ್ಯ : ______________

೫. ಧೇವಲೋಕ : ______________

೬. ಚಿಂತಕ್ರಾಂತ : ______________

ಈ) ಸೂಕ್ತವಾದ ಅರ್ಥ ಹುಡುಕಿ ಬರೆಯಿರಿ.

೧. ಲಭಿಸು – ______________________________

೨. ದೃಢಸಂಕಲ್ಪ – ______________________________

೩. ಭೋರ್ಗರೆ – ______________________________

೪. ಸದ್ಗತಿ – ______________________________

೫. ಮಹರ್ಷಿ – ______________________________

@KTBS NOT TO BE REPUBLISHED

## ಸಾಮರ್ಥ್ಯಾಧಾರಿತ ಚಟುವಟಿಕೆ

ಅ) ಈ ಕೆಳಗಿನ ಪತ್ಯ ಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿ, ಅರ್ಥ ಪೂರ್ಣವಾಗಿ ಓದು.

ಭಗೀರಥನ ಅನೇಕ ವರ್ಷಗಳ ಕಠಿಣ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷಳಾದ ಗಂಗೆ ನಿನ್ನ ಇಚ್ಛೆಯಂತೆ ನಾನು ಭೂಮಿಗೆ ಧುಮುಕುತ್ತೇನೆ ಆದರೆ ನನ್ನ ರಭಸವನ್ನು ತಡೆಯುವವರು ಯಾರು ಎಂದಳು

## ಲೇಖನ ಚಿಹ್ನೆಗಳು

| | | |
|---|---|---|
| * ಅಲ್ಪವಿರಾಮ | , | ವಾಕ್ಯಾಂಶಗಳ ಮುಂದುವರಿಕೆಯಲ್ಲಿ ಬಳಸುವುದು. |
| * ಅರ್ಧವಿರಾಮ | ; | ವಾಕ್ಯದ ಮುಂದುವರಿಕೆಯಲ್ಲಿ ಬಳಸುವುದು. |
| * ವಿವರಣ ಚಿಹ್ನೆ | : | ಒಂದು ಅಭಿಪ್ರಾಯದ ವಿವರಣೆ ಮುಂದಿನಂತೆ ಇದೆ ಎಂದು ತೋರಿಸುವಾಗ ಬಳಸುವುದು. |
| * ಪೂರ್ಣವಿರಾಮ | . | ಪೂರ್ಣ ವಾಕ್ಯದ ಕೊನೆಯಲ್ಲಿ ಬಳಸುವುದು. |
| * ಭಾವ ಸೂಚಕ | ! | ಅಚ್ಚರಿ, ಖೇದ, ಸಂತೋಷ, ವಿಷಾದ ಇತ್ಯಾದಿ ಭಾವಗಳನ್ನು ಸೂಚಿಸಲು ಬಳಸುವುದು. |
| * ಪ್ರಶ್ನಾರ್ಥಕ | ? | ಪ್ರಶ್ನೆಯನ್ನು ಸೂಚಿಸಲು ಬಳಸುವುದು. |
| * ಉದ್ಧರಣ ಚಿಹ್ನೆ | “ ” | ಹೇಳಿಕೆ/ಮಾತುಗಳನ್ನು ಗುರ್ತಿಸಲು ಬಳಸುವುದು. |
| * ಆವರಣ ಚಿಹ್ನೆ | ( ) | ಪರ್ಯಾಯ ಅಥವಾ ಹೆಚ್ಚಿನ ವಿವರವನ್ನು ತಿಳಿಸುವಾಗ ಬಳಸುವುದು. |

## ಚಟುವಟಿಕೆ

೧. ನಮ್ಮ ರಾಜ್ಯದಲ್ಲಿ ಹರಿಯುವ ನದಿಗಳ ಹೆಸರನ್ನು ಪಟ್ಟಿ ಮಾಡು.

೨. ಪೌರಾಣಿಕ ಕತೆಗಳನ್ನು ಕೇಳಿ/ ಓದಿ ತಿಳಿ.



©KTBS NOT TO BE REPUBLISHED

# ಪಾಠ ೧೦ ಮೃಗಾಲಯದಲ್ಲಿ ಒಂದು ದಿನ

I9B5K4

– ಸಮಿತಿ ರಚನೆ

**ಸಾಮರ್ಥ್ಯ :** ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು.

**ಪ್ರವೇಶ :** ನಾವು ಕುತೂಹಲ ತಣಿಸಲು, ಜ್ಞಾನ ಸಂಪಾದಿಸಲು, ಸಂತೋಷ ಪಡೆಯಲು ಹೊರಸಂಚಾರ, ಪ್ರವಾಸ ಕೈಗೊಳ್ಳುತ್ತೇವೆ. ಸಂಗ್ರಹಾಲಯಗಳಿಗೆ ಭೇಟಿ ನೀಡುತ್ತೇವೆ. ಮೃಗಾಲಯ ಭೇಟಿಯಿಂದ ಮಕ್ಕಳು ಪಡೆದ ಹೊಸ ಅನುಭವಗಳನ್ನು ತಿಳಿ.


**ಅಂದು ಮಕ್ಕಳಿಗೆಲ್ಲರಿಗೂ ಸಂತಸವೋ ಸಂತಸ. ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಮೃಗಾಲಯಕ್ಕೆ ಹೊರಟಿದ್ದರು.**

**ಶಿಕ್ಷಕಿ** : ಮಕ್ಕಳೇ, ನಡೆಯುವಾಗ ಪಾದಚಾರಿಗಳ ರಸ್ತೆಯಲ್ಲಿಯೇ ನಡೆಯಿರಿ. ಮೊದಲು ಸೂಚನಾ ಫಲಕಗಳು ಹಾಗೂ ಭಿತ್ತಿ ಪತ್ರಗಳ ಕಡೆಗೆ ಲಕ್ಷ್ಯ ಹರಿಸಿ.

**ಲತಾ** : ಗುರುಗಳೇ ಸೂಚನಾ ಫಲಕಗಳೆಂದರೇನು?

**ಶಿಕ್ಷಕಿ** : ಮಕ್ಕಳೇ, ಯಾವುದೇ ಸೂಚನೆಗಳನ್ನು ಒಳಗೊಂಡ ಫಲಕಗಳೇ ಸೂಚನಾ ಫಲಕಗಳು.

@KTBS
NOT TO BE REPUBLISHED




**ಆದರ್ಶ** : ಗುರುಗಳೇ, ಇದು "ಶಾಲಾವಲಯ, ನಿಧಾನವಾಗಿ ಚಲಿಸಿ" ಎಂದು ಅಲ್ಲಿ ಬರೆದಿದೆ. ಏಕೆ?

**ನವ್ಯ** : ಆದರ್ಶ, ಶಾಲಾ ಮಕ್ಕಳು ಅಲ್ಲಿ ರಸ್ತೆ ದಾಟುವುದರಿಂದ ಚಾಲಕರು ವಾಹನಗಳನ್ನು ಎಚ್ಚರಿಕೆಯಿಂದ ಚಲಾಯಿಸಬೇಕು ಎನ್ನುವ ಕಾರಣಕ್ಕಾಗಿ ಈ ಫಲಕವನ್ನು ಹಾಕಿದೆ. ಅಲ್ಲವೆ ಗುರುಗಳೇ?

**ಶಿಕ್ಷಕ** : ಹೌದು ನವ್ಯ, ನೀನು ಹೇಳಿದ್ದು ನಿಜ.

**ರಮ್ಯಾ** : (ಪಲ್ಸ್ ಪೋಲಿಯೋದ ಭಿತ್ತಿ ಪತ್ರವನ್ನು ತೋರಿಸುತ್ತಾ) ಅಲ್ಲಿ ಮೇಲೆ ಅಂಟಿಸಿರುವುದು ಸೂಚನಾ ಫಲಕವೇ ಟೀಚರ್?

**ಶಿಕ್ಷಕಿ** : ಅಲ್ಲ ರಮ್ಯಾ, ಅದು ಭಿತ್ತಿಪತ್ರ.

**ಜಾಹ್ನವಿ** : ಭಿತ್ತಿಪತ್ರ! ಹಾಗೆಂದರೇನು ಟೀಚರ್?

**ಶಿಕ್ಷಕಿ** : ಮಕ್ಕಳೇ, ಇಲ್ಲಿ ಕೇಳಿ. ಭಿತ್ತಿ ಅಂದ್ರೆ ಗೋಡೆ. ಗೋಡೆಗೆ ಅಂಟಿಸುವ ಪತ್ರಗಳೇ ಭಿತ್ತಿಪತ್ರಗಳು. ಅವು ದೊಡ್ಡದಾಗಿದ್ದು ಸಂದೇಶವನ್ನು ಸ್ಪಷ್ಟವಾಗಿ ಹಾಗೂ ಆಕರ್ಷಕವಾಗಿ ನಮಗೆ ತಿಳಿಸುತ್ತವೆ. ಅಲ್ಲದೇ ಕೆಲವೊಂದು ಭಿತ್ತಿಪತ್ರಗಳು ಚಿತ್ರದೊಂದಿಗೆ ಕೂಡ ಇರುತ್ತವೆ.

**ಅನುಷ** : ಅಲ್ಲಿ ನೋಡಿ, “ಮೃಗಾಲಯಕ್ಕೆ ದಾರಿ” ಎಂದು ಬರೆದಿದೆ.

**ಗೋಪಿ** : ಹೌದು, ಅದು ಸೂಚನಾ ಫಲಕ.

**ಶಿಕ್ಷಕ** : ಮಕ್ಕಳೇ, ಈಗ ನಾವೆಲ್ಲರೂ ಈ ಫಲಕದಲ್ಲಿನ ಬಾಣದ ಗುರುತಿನಂತೆ ಬಲಕ್ಕೆ ತಿರುಗಿ ಹೋಗೋಣ. ನಾನು ಹೋಗಿ ಟಿಕೆಟ್ ತರುವೆ. ಅನಂತರ ಎಲ್ಲರೂ ಒಳಗೆ ಹೋಗೋಣ.

*(ಮಕ್ಕಳೆಲ್ಲರೂ ಒಂದೆಡೆ ನಿಂತರು. ಅಷ್ಟರಲ್ಲಿ ಗುರುಗಳು ಟಿಕೆಟ್ ತಂದರು. ಎಲ್ಲರೂ ಸಾಲಾಗಿ ಒಳಗೆ ಹೋದರು. ಒಳಗೆ ವಿವಿಧ ಪ್ರಾಣಿಗಳು, ಪಕ್ಷಿಗಳು, ಹೂಗಳು ಮಕ್ಕಳನ್ನು ಆಕರ್ಷಿಸಿದವು.)*

(ರೇವಂತನು ಒಂದು ಕಲ್ಲನ್ನೆತ್ತಿ ಚಿಂಪಾಂಜಿಗೆ ಹೊಡೆಯಲು ಹೋದ.)

@KTBS NOT TO BE REPUBLISHED




**ಆದರ್ಶ** : ರೇವಂತ, ಅದಕ್ಕೆ ಕಲ್ಲು ಹೊಡೆಯಬೇಡ, ಅಲ್ಲಿರುವ ಸೂಚನಾ ಫಲಕವನ್ನು ಓದು.

(ಸೂಚನಾ ಫಲಕವನ್ನು ಓದಿದ ರೇವಂತನು ಜೋರಾಗಿ)

"ಪ್ರಾಣಿಗಳನ್ನು ಹಿಂಸಿಸಬಾರದು ಮತ್ತು ಅವುಗಳಿಗೆ ತಿಂಡಿ ತಿನಿಸುಗಳನ್ನು ಕೊಡಬಾರದು".

**ರೇವಂತ** : ಕ್ಷಮಿಸಿ, ಪ್ರಾಣಿಗಳನ್ನು ಹಿಂಸಿಸಬಾರದು. ಸರಿ, ಆದರೆ ತಿಂಡಿತಿನಿಸುಗಳನ್ನು ಏಕೆ ಕೊಡಬಾರದು? ಸರ್.

**ಶಿಕ್ಷಕ** : ಮಕ್ಕಳೇ, ಪ್ರಾಣಿಗಳನ್ನು ನೋಡಿಕೊಳ್ಳುವವರೇ ಅವುಗಳಿಗೆ ಸಾಕಷ್ಟು ಆಹಾರವನ್ನು ಕೊಡುತ್ತಾರೆ. ಇಲ್ಲಿಗೆ ಬರುವವರೆಲ್ಲರೂ ಆಹಾರವನ್ನು ಕೊಡುತ್ತಾ ಹೋದರೆ ಅವುಗಳ ಆರೋಗ್ಯ ಕೆಡಬಹುದು. ಇಲ್ಲವೇ ಕೆಲವು ಪ್ರಾಣಿಗಳಿಂದ ನಮಗೇ ತೊಂದರೆಯಾಗಬಹುದು.

*(ಹೀಗೆ ಮಾತನಾಡುತ್ತಾ ಹೋಗುವಾಗ ಶಶಾಂಕನು ಜೋರಾಗಿಯೇ) "ಅಲ್ಲಿ ನೋಡ್ರೋ! ಗೊರಿಲ್ಲಾ, ಆನೆ, ಹುಲಿ, ಕಾಡೆಮ್ಮೆ, ಜಿಂಕೆ, ಕೋತಿ, ಜಿರಾಫೆಗಳನ್ನು, ಆಹಾ! ನೋಡೋಕೆ ಎಷ್ಟು ಚೆನ್ನಾಗಿವೆ" ಎಂದನು.*

**ಶಿಕ್ಷಕಿ** : ಹೌದು, ನಿಮಗೆ ಅವುಗಳ ಬಗ್ಗೆ ಇನ್ನಷ್ಟು ವಿವರಗಳನ್ನು ತಿಳಿಸುತ್ತೇನೆ.

**ಬೇಬಿ** : ಏ, ಅಲ್ಲಿ ನೋಡ್ರೋ ಆನೆ ಹೇಗೆ ತನ್ನ ಸೊಂಡಿಲಿನಿಂದ ನೀರನ್ನು ಸುರಿದುಕೊಳ್ತಾ ಇದೆ!

@KTBS NOT TO BE REPUBLISHED

**ಸುಮತಿ** : ಹೌದು, ಎಷ್ಟು ಚೆನ್ನಾಗಿದೆ ಅಲ್ವಾ ನೋಡ್ಲಿಕ್ಕೆ?

**ಮೇರಿ** : ಸರ್, ಅಲ್ಲಿ ನೋಡಿ. ಮಂಗ ಅಲ್ಲಿರುವ ಸೂಚನಾ ಫಲಕವನ್ನು ತಿರುಗಿಸುತ್ತಿದೆ.

**ಶಿಕ್ಷಕ** : ಹೌದು ಮೇರಿ. ಅದು ಸೂಚನಾ ಫಲಕವನ್ನು ತಿರುಗಿಸುತ್ತಾ ಆಟವಾಡುತ್ತಿದೆ. "ಪಕ್ಷಿಗಳ ವಿಭಾಗಕ್ಕೆ ದಾರಿ" ಎಂದು ಅದರಲ್ಲಿ ಬರೆದಿದೆ.

**ಲಕ್ಷ್ಮಿ** : ಟೀಚರ್, ಸೂಚನಾ ಫಲಕವನ್ನು ತಿರುಗಿಸಿ ಮಂಗ ಮರ ಹತ್ತಿ ಹೋಯ್ತು.

**ಶಿಕ್ಷಕಿ** : ಹೌದು, ಸೂಚನಾ ಫಲಕವನ್ನು ತಿರುಗಿಸಿ ಬಿಟ್ಟರೆ ವೀಕ್ಷಕರಿಗೆ ತುಂಬಾ ತೊಂದರೆ ಆಗುತ್ತದೆ.

**ಮುಮ್ತಾಜ್**: ಛೇ, ಮಂಗವು ಸೂಚನಾಫಲಕವನ್ನು ತಿರುಗಿಸಿದ್ದರಿಂದ ಪಕ್ಷಿಗಳ ವಿಭಾಗಕ್ಕೆ ಹೋಗುವುದರ ಬದಲಾಗಿ ಹೊರಗೆ ಹೋಗಬೇಕಾಗುತ್ತದೆ ಅಲ್ಲವೇ?

**ಸುಮನ** : ಪಾಪ, ಎಷ್ಟು ತೊಂದರೆಯಾಗುತ್ತದೆ ಅಲ್ಲವೇ? ಇದನ್ನು ಯಾರು ಸರಿಪಡಿಸುತ್ತಾರೆ?

**ಶಿಕ್ಷಕ** : ಇಲ್ಲಿ ಪ್ರಾಣಿಗಳನ್ನು ನೋಡಿಕೊಳ್ಳುವವರೇ ಇವುಗಳನ್ನೆಲ್ಲಾ ಸರಿಪಡಿಸುತ್ತಾರೆ. ನಾನಿದನ್ನು ಅವರ ಗಮನಕ್ಕೆ ತರುತ್ತೇನೆ.

**ಶಾರೂನ್** : ಹೇ, ಎಲ್ಲಾ ಇಲ್ಲಿ ಬನ್ರೋ, ಇಲ್ಲಿ ತುಂಬಾ ಹಾವುಗಳಿವೆ. ಅಬ್ಬಾ! ನೋಡಿದ್ರೆ ಮೈ ಜುಮ್ಮೆನ್ನುತ್ತೆ !

(ಎಲ್ಲರೂ ಹೌದೌದು ಎಂದರು)

**ಶ್ರುತಿ** : ಅಯ್ಯೋ, ನನಗೆ ತುಂಬಾ ಸುಸ್ತಾಗಿದೆ.

**ಶಿಕ್ಷಕಿ** : ಸರಿ, ನೀವೆಲ್ಲಾ ಇಲ್ಲಿರುವ ಕಲ್ಲಿನ ಬೆಂಚಿನ ಮೇಲೆ ಕುಳಿತುಕೊಳ್ಳಿ. ನಾವು ತಂದಿರುವ ತಿಂಡಿತಿನಿಸುಗಳನ್ನು ಹಂಚಿಕೊಂಡು ತಿನ್ನೋಣ.

**ಶಿಕ್ಷಕ** : ಮಕ್ಕಳೇ, ನೋಡಿ ನೀವೆಲ್ಲಾ ತಿಂಡಿ ತಿಂದ ನಂತರ ನಿಮಗೆ ಬೇಡವಾದ ವಸ್ತುಗಳನ್ನು "ನನ್ನನ್ನು ಉಪಯೋಗಿಸಿ" ಎಂದು ಬರೆದಿದೆಯಲ್ಲಾ, ಆ ಡಬ್ಬದೊಳಗೆ ಹಾಕಿರಿ.

**ಅವಿನಾಶ್** : ಗುರುಗಳೇ, ನನಗೆ ತುಂಬಾ ಬಾಯಾರಿಕೆಯಾಗಿದೆ.

@KTBS NOT TO BE REPUBLISHED

**ಶಿಕ್ಷಕ** : ಹೌದಾ, ಯಾರಿಗೆಲ್ಲಾ ಬಾಯಾರಿಕೆಯಾಗಿದೆ, ಅವರೆಲ್ಲಾ ನನ್ನೊಂದಿಗೆ ಬನ್ನಿ, ಅಲ್ಲಿರುವ ನಳದ ಬಳಿ ಹೋಗಿ ನೀರು ಕುಡಿಯುವಾ.

(ಮಕ್ಕಳು ಶಿಕ್ಷಕರೊಂದಿಗೆ ಹೋಗಿ ನೀರು ಕುಡಿದರು.)

**ಶಶಾಂಕ** : ಧನುಷ್, ಅಲ್ಲಿ ನೋಡು. ಇಲ್ಲಿಯೂ ಕೂಡ ಗೋಡೆಯ ಮೇಲೆ ಬರೆದಿದೆ.

**ಧನುಷ್** : ಹೌದು. "ನೀರು ಅಮೂಲ್ಯವಾದದ್ದು. ಮಿತವಾಗಿ ಬಳಸಿ" ಎಂದಿದೆ.

**ಶಿಕ್ಷಕಿ** : ನೀವೆಲ್ಲರೂ ತುಂಬಾ ಜಾಣ ಮಕ್ಕಳು. ಇಂದು ನೀವು ಎಷ್ಟೋ ವಿಚಾರಗಳನ್ನು ತಿಳಿದುಕೊಂಡಿರಿ. ಈಗ ನಾವು ಪಕ್ಷಿಗಳನ್ನು ನೋಡಲು ಹೋಗೋಣ. (ಎಲ್ಲರೂ ಪಕ್ಷಿಗಳನ್ನು ನೋಡಲು ತೆರಳಿದರು).

## ಪದಗಳ ಅರ್ಥ

ಲಕ್ಷ್ಯ–ಗಮನ ; ಆಕರ್ಷಿಸು–ಮನ ಸೆಳೆ ; ಪರಿಮಳ–ಸುವಾಸನೆ ; ಸಾಧ್ಯತೆ–ಆಗಬಹುದಾದ್ದು, ನಡೆಯಬಹುದಾದ್ದು ; ಅಮೂಲ್ಯ – ಬೆಲೆ ಬಾಳುವ, ಶ್ರೇಷ್ಠ ; ನಳ– ನಲ್ಲಿ.

## ಟಿಪ್ಪಣಿ

ಮೃಗಾಲಯ – ಪ್ರಾಣಿ, ಪಕ್ಷಿ, ಜಲಚರಗಳನ್ನು ಪ್ರದರ್ಶನಕ್ಕಾಗಿ ಕೂಡಿಟ್ಟಿರುವ ಸ್ಥಳ.

ಪಾದಚಾರಿ – ಕಾಲುನಡಿಗೆಯಲ್ಲಿ ಸಾಗುವವನು

© KTBS NOT TO BE REPUBLISHED

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ಮಕ್ಕಳು ಮೊದಲು ಏನನ್ನು ಗಮನಿಸಬೇಕೆಂದು ಶಿಕ್ಷಕರು ಹೇಳಿದರು?

______________________

೨. ಸೂಚನಾ ಫಲಕಗಳೆಂದರೇನು?

______________________

೩. ಶಾಲಾ ವಲಯದಲ್ಲಿದ್ದ ಸೂಚನಾ ಫಲಕದಲ್ಲಿ ಏನೆಂದು ಬರೆದಿತ್ತು?

______________________

೪. ಮೃಗಾಲಯ ಎಂದರೇನು?

______________________

## ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಸೂಚನಾ ಫಲಕವನ್ನು ಏಕೆ ಹಾಕುತ್ತಾರೆ?

________________________________________

________________________________________

೨. ಭಿತ್ತಿಪತ್ರದ ಕುರಿತು ಬರೆಯಿರಿ.

________________________________________

________________________________________

೩. ನೀರನ್ನು ಮಿತವಾಗಿ ಬಳಸಬೇಕು. ಏಕೆ?

________________________________________

________________________________________

೪. ಮೃಗಾಲಯದಲ್ಲಿ ನಾವು ಪ್ರಾಣಿಗಳಿಗೆ ಏಕೆ ತಿಂಡಿ ತಿನಿಸು ಕೊಡಬಾರದು?

________________________________________

________________________________________

೫. ನೀನು ಇಷ್ಟಪಟ್ಟ ಒಂದು ಸೂಚನಾ ಫಲಕ ಯಾವುದು? ಏಕೆ?

________________________________________

________________________________________

@KTBS NOT TO BE REPUBLISHED

## ಇ) ಕೆಳಗಿನ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸು.

೧. ಫಲಕ – ________________________________________

೨. ಗಮನ – ________________________________________

೩. ಪರಿಮಳ –________________________________________

## ಈ) ವಿರುದ್ಧಾರ್ಥಕ ಪದಗಳನ್ನು ಬರೆ.

೧. ಜಾಗರೂಕ x ____________________


೨. ಒಳಗೆ x ____________________

೩. ಮುಂದೆ x ____________________

೪. ದೊಡ್ಡದು x ____________________

### ಸಾಮರ್ಥ್ಯಾಧಾರಿತ ಚಟುವಟಿಕೆ

## ಅ) ಚಿತ್ರಗಳನ್ನು ಗಮನಿಸಿ ಸೂಚನೆಗಳನ್ನು ಬರೆ.

| | |
|---|---|
|  | |
|  | |
|  | |
|  | |

@KTBS NOT TO BE REPUBLISHED

## ಆ) ಭಿತ್ತಿಪತ್ರವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸು.

ನೀಲಾವರ "ಅನನ್ಯ, ಚಿಣ್ಣರ ನಾಟಕ ಬಳಗ" ಅರ್ಪಿಸುವ ಹಾಸ್ಯಭರಿತ ನಾಟಕ

**"ಗುಡುಗುಡು ಗುಮ್ಮಟ ದೇವರು"**

ಬನ್ನಿ, ನೋಡಿ ಆನಂದಿಸಿ, ಪ್ರೋತ್ಸಾಹಿಸಿ.

ದಿನಾಂಕ : ೧೦-೧೧-೨೦೨೪

**ಸಮಯ :** ಸಂಜೆ ಐದು ಗಂಟೆ **ಸ್ಥಳ :** ಪ್ರಾಥಮಿಕ ಶಾಲಾ ಮೈದಾನ, ಬ್ರಹ್ಮಾವರ

**ಸರ್ವರಿಗೂ ಉಚಿತ ಪ್ರವೇಶ**

೧. ಇದು ಯಾವುದರ ಭಿತ್ತಿಪತ್ರ?

_______________

೨. ಯಾವ ನಾಟಕ ಬಳಗದವರು ನಾಟಕವನ್ನು ಆಡಿ ತೋರಿಸಲಿದ್ದಾರೆ?

_______________

೩. ನಾಟಕದ ಹೆಸರೇನು?

_______________

೪. ನಾಟಕ ಎಲ್ಲಿ ನಡೆಯುತ್ತದೆ?

_______________

## ಭಾಷಾಭ್ಯಾಸ

**ಅ) ಈ ಪಾಠದಲ್ಲಿ ಬರುವ ಬಹುವಚನ ಪದಗಳನ್ನು ಆರಿಸಿ ಬರೆ.**

೧. __________ ೪. __________

೨. __________ ೫. __________

೩. __________ ೬. __________

**ಆ) ಕೊಟ್ಟಿರುವ ವಾಕ್ಯಗಳನ್ನು ಶೀಘ್ರಗತಿಯಲ್ಲಿ ಹೇಳು ಹಾಗೂ ಗೆಳೆಯರಿಂದ ಹೇಳಿಸು.**

೧. ತರಿಕೆರೆ ಏರಿ ಮೇಲೆ ಮೂರು ಕರಿ ಕುರಿಮರಿ

೨. ಅತಳ ವಿತಳ ಸುತಳ ರಸಾತಳ ತಳಾತಳ ಮಹಾತಳ ಪಾತಾಳ

೩. ಕುದುರೆ ಓಡುತ್ತೆ ಕುಂಕುಮ ಚೆಲ್ಲುತ್ತೆ

೪. ಅಂಬರದಲ್ಲಾಡೋ ಹುಡ್ಗ ಅವನ ಕಾಲಾಗ ಬೆಳ್ಳಿ ಕಡ್ಗ

(ಇಂತಹ ವಾಕ್ಯಗಳನ್ನು ಸಂಗ್ರಹಿಸು)

**ಇ) ಮಾದರಿಯಂತೆ ಬದಲಾಯಿಸು.**

**ಮಾದರಿ – ಹಾರು : ಹಾರುತ್ತಾನೆ, ಹಾರುವನು, ಹಾರಿದನು**

ಮಾಡು : __________ __________ __________

ಊದು : __________ __________ __________

ಹಾಡು : __________ __________ __________

@KTBS NOT TO BE REPUBLISHED

ಈ) ಮಾದರಿ ವಾಕ್ಯಗಳನ್ನು ಗಮನಿಸಿ ನೀಡಿರುವ ಶಬ್ದಗಳಿಗೆ ವಾಕ್ಯಗಳನ್ನು ಬರೆ.

ಮಾದರಿ : (ರಾಜು, ಮೃಗಾಲಯಕ್ಕೆ, ಹೋಗು)

೧. ರಾಜು ಮೃಗಾಲಯಕ್ಕೆ ಹೋದನು.
೨. ರಾಜು ಮೃಗಾಲಯಕ್ಕೆ ಹೋಗುತ್ತಾನೆ.
೩. ರಾಜು ಮೃಗಾಲಯಕ್ಕೆ ಹೋಗುವನು.

ರಾಮು, ಹಣ್ಣನ್ನು, ತಿನ್ನು

೧. ____________________
೨. ____________________
೩. ____________________

## ಭಾಷಾ ಚಟುವಟಿಕೆ

ಅ) ಆವರಣದಲ್ಲಿರುವ ಪದಗಳಿಂದ ಸೂಕ್ತ ಪದ ಆಯ್ದು ವಾಕ್ಯ ಪೂರ್ಣಗೊಳಿಸು.

೧. ಅನ್ನ ಮಾಡಲು __________ ಬೇಕು. (ಅಕ್ಕಿ, ಹಕ್ಕಿ)
೨. ಗೋಡೆಗಳ ಮೇಲೆ __________ ಗಳು ಲೊಚಗುಡುತ್ತಿರುತ್ತವೆ. (ಅಲ್ಲಿ, ಹಲ್ಲಿ)
೩. ದನಗಳನ್ನು ಕಟ್ಟಲು __________ ಬಳಸುತ್ತಾರೆ. (ಅಗ್ಗ, ಹಗ್ಗ)
೪. ಐದರ ಆನಂತರದ ಸಂಖ್ಯೆ __________ (ಆರು, ಹಾರು)

ಆ) ಕೆಳಗೆ ನೀಡಿರುವ ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ಪದ ರಚಿಸು.

ಉದಾ : ಲ ಮೃ ಯ ಗಾ : ಮೃಗಾಲಯ

೧. ತ್ರ ತ್ತಿ ಭಿ ಪ : __________
೨. ಕ ಸೂ ಫ ನಾ ಚ ಲ: __________
೩. ಯ ವ ಶಾ ಲ ಲಾ : __________
೪. ತಿ ಸು ತಿಂ ನಿ ಡಿ : __________
೫. ತ ರಿ ಹಾ ಸ್ಯ ಭ : __________

@KTBS NOT TO BE REPUBLISHED

## ಇ) ಒಂದೇ ರೀತಿಯ ಆಕೃತಿಗಳಲ್ಲಿರುವ ಅಕ್ಷರಗಳನ್ನು ಗುರುತಿಸಿಕೊಂಡು ಮಾದರಿಯಂತೆ ಪದ ರಚಿಸು.

**ಮಾದರಿ : ಚಿಂಪಾಂಜಿ**

| | | | | | |
|---|---|---|---|---|---|
| ಭಿ | ಮೃ | ಚಿಂ | ಪೊ | ಚ | ಕ |
| ತ್ರ | ರ್ಷಿ | ನೆ | ತ್ತಿ | ಲ | ಪ |
| ಜಿ | ಸೂ | ಯ | ಗಾ | ಆ | ಯೋ |
| ಸು | ಪಾಂ | ಲಿ | | | |

೧. ______________ ೩. ______________

೨. ______________ ೪. ______________

@KTBS NOT TO BE REPUBLISHED

## ಈ) 'ಅ' ಅಕ್ಷರದಿಂದ ಆರಂಭವಾಗುವ ಪದಗಳನ್ನು ಬರೆ.

**ಮಾದರಿ : ಅಳತೆ**

೧. ______________ ೨. ______________

೩. ______________ ೪. ______________

೫. ______________ ೬. ______________

## ಉ) ಮಾದರಿಯಂತೆ ಕೂಡಿಸಿ ಬರೆ.

**ಮಾದರಿ : ಶಾಲೆ + ಅನ್ನು = ಶಾಲೆಯನ್ನು**

೧. ಮನೆ + ಅನ್ನು = ______________

೨. ಕಿಟಕಿ + ಅನ್ನು = ______________

೩. ಚಾಪೆ + ಅನ್ನು = ______________

೪. ರಸ್ತೆ + ಅನ್ನು = ______________

೫. ಪಕ್ಷಿ + ಅನ್ನು = ______________

# ಪಾಠ ೧೧ ಜಾತ್ರೆ

– ಸಮಿತಿ ರಚನೆ

S5Z4Y3

**ಸಾಮರ್ಥ್ಯ :** ಸೂಚನೆಗಳನ್ನು ಅನುಸರಿಸಿ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯಗಳನ್ನು ರಚಿಸುವುದು.

**ಪ್ರವೇಶ :** ನೀನು ಜಾತ್ರೆಯನ್ನು ನೋಡಿರುವಿಯಲ್ಲವೇ? ಅಲ್ಲಿ ಕಂಡ ದೃಶ್ಯಗಳನ್ನು, ಕೊಂಡ ತಿಂಡಿ–ತಿನಿಸು, ಆಟಿಕೆಗಳನ್ನು ನೆನಪಿಸಿಕೊ. ನಿನ್ನಂತೆ ಇತರರೂ ಜಾತ್ರೆಗೆ ಹೋಗಿರುತ್ತಾರೆ. ಅವರ ಜಾತ್ರೆಯ ಅನುಭವವನ್ನು ತಿಳಿ.

ಊರ ಜಾತ್ರೆಯ ಸಂಭ್ರಮ. ರಥ ಬೀದಿಯು ತಳಿರು ತೋರಣ ಹಾಗೂ ಬಣ್ಣದ ಹೂಗಳ ಅಲಂಕಾರದಿಂದ ಕಂಗೊಳಿಸುತ್ತಿತ್ತು. ನೋಡಿದಲ್ಲೆಲ್ಲಾ ಜನ ಸಾಗರವೇ ನೆರೆದಿತ್ತು. ರಾಜು ಮತ್ತು ಕಮಲ ತಾತನ ಜೊತೆ ಜಾತ್ರೆಗೆ ಬಂದಿದ್ದರು. ಅವರ ಬಳಿ ಜಾತ್ರೆಯಲ್ಲಿ ಕೊಂಡಿದ್ದ ಆಟಿಕೆಗಳು ಹಾಗೂ ತಿನಿಸುಗಳು ಇದ್ದವು. ತಾತನ ಅಕ್ಕ ಪಕ್ಕ ನಿಂತು, ಭಕ್ತರು ರಥ ಎಳೆಯುವುದನ್ನು ನೋಡುತ್ತಿದ್ದರು.

©KTBS NOT TO BE REPUBLISHED



ಅಲ್ಲಿ ಕಂಕುಳಲ್ಲಿ ಜೋಳಿಗೆ ಹಾಕಿ, ಹಣೆಗೆ ವಿಭೂತಿ ಧರಿಸಿ, ಚಣಕು ಚಣಕು ಎಂದು ಬಡಿಯುತ್ತಾ ಹಾಡುತ್ತಿರುವ ಜನರನ್ನು ರಾಜು ಕಂಡನು. ಕುತೂಹಲದಿಂದ "ತಾತ ತಾತ ಅವರು ಯಾರು? ಅವರು ಏನು ಮಾಡುತ್ತಿದ್ದಾರೆ?" ಎಂದನು. ಅದಕ್ಕೆ ತಾತ "ಓ! ಅವರಾ?... ಕಂಸಾಳೆ ನೃತ್ಯದವರು. ಅವರು ಮಲೆಯ ಮಹದೇಶ್ವರನ ಭಕ್ತರಾದ ದೇವರಗುಡ್ಡರು. ನೋಡು, ಅವರು ತಟ್ಟುತ್ತಿರುವುದು ಕಂಚಿನ ತಾಳ. ಅದಕ್ಕೆ ಕಂಸಾಳೆ ಎಂದು ಹೆಸರು.



ಅದರಲ್ಲಿ ಅಂಗೈ ಅಗಲ ಚಕ್ರಾಕಾರದ ಬಟ್ಟಲು ಮತ್ತು ಜಾಗಟೆಯಂತಿರುವ ಮಟ್ಟಸವಾದ ಮೇಲು ತಾಳ ಇದೆ. ಅವರು ಬಟ್ಟಲನ್ನು ಎಡಗೈಯ ಅಂಗೈ ಮೇಲೆ ಇರಿಸಿ ಬಲಗೈಯ ಮೇಲು ತಾಳದಿಂದ ತಟ್ಟುತ್ತಿದ್ದಾರೆ. ಇದರಿಂದ ಮಧುರ ನಾದ ಬರುತ್ತದೆ. ಅವರು ಮಹದೇಶ್ವರನನ್ನು ಕುರಿತು ಹಾಡುತ್ತಾ ಬಾಗಿ, ಬಳುಕಿ, ಕುಳಿತು, ನಿಂತು ಲಯವಾಗಿ ಕಂಸಾಳೆಯನ್ನು ತಟ್ಟುತ್ತಾ ನರ್ತಿಸುತ್ತಿದ್ದಾರೆ. ಈಗ ನೋಡು ಅವರು ಕಂಸಾಳೆಯನ್ನು ಬೀಸುತ್ತಾ ನೃತ್ಯ ಮಾಡುತ್ತಿದ್ದಾರೆ ಅಲ್ಲವೇ? ಇದಕ್ಕೆ ಬೀಸು ಕಂಸಾಳೆ ಎಂದು ಹೆಸರು. ಕಂಸಾಳೆ ನೃತ್ಯವನ್ನು ಈ ರೀತಿ ಜಾತ್ರೆ, ಕಲಾ ಮೇಳ, ಹಬ್ಬ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿ ಮಾಡುತ್ತಾರೆ. ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಲ್ಲಿ ಈ ಕಲೆ ಹೆಚ್ಚಾಗಿ ಕಂಡುಬರುತ್ತದೆ” ಎಂದರು.

@KTBS NOT TO BE REPUBLISHED



ಕಂಸಾಳೆಯವರು ಮುಂದೆ ಹೋಗುತ್ತಿದ್ದಂತೆ ಡಬ್ ಡಬ್ ಸದ್ದು ಮಾಡುತ್ತಾ ಬಂದ ತಂಡವನ್ನು ಕಮಲ ಕುತೂಹಲದಿಂದ ನೋಡಿದಳು. ಆ ತಂಡದ ಬಗ್ಗೆ ತಿಳಿಯಲು ಆಸೆಯಿಂದ "ತಾತ ಅವರು ಯಾರು?" ಎಂದು ಕೇಳಿದಳು. ಅದಕ್ಕೆ ತಾತ, "ಅವರು ಬೀರ ದೇವರ ಭಕ್ತರು. ಅವರು ಡೊಳ್ಳನ್ನು ಬಡಿಯುತ್ತಾ ನೃತ್ಯ ಮಾಡುತ್ತಿದ್ದಾರೆ. ಡೊಳ್ಳು ಎಂದರೆ ಅದು ಒಂದು ಬಗೆಯ ಚರ್ಮ ವಾದ್ಯ. ಅದರ ಭಾರವೂ ಹೆಚ್ಚು, ಹಾಗೆಯೇ ನಾದವೂ ಹೆಚ್ಚು. ನೋಡು! ಅವರು ಕೋಲಿನಿಂದ ಡೊಳ್ಳನ್ನು ಬಾರಿಸುತ್ತಾ ಹೇಗೆ ಬೇರೆ ಬೇರೆ ಭಂಗಿಗಳಲ್ಲಿ ನೃತ್ಯ ಮಾಡುತ್ತಿದ್ದಾರೆ. ಈ ನೃತ್ಯವನ್ನು ಜಾತ್ರೆ, ಉತ್ಸವ, ಕಲಾ ಮೇಳ, ಹಬ್ಬ ಮುಂತಾದ ಸಂದರ್ಭಗಳಲ್ಲಿ ಮಾಡುತ್ತಾರೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಈ ಕಲೆ ಹೆಚ್ಚಾಗಿ ಕಂಡುಬರುತ್ತದೆ" ಎಂದರು.

ಅವರೆಲ್ಲ ಮೆರವಣಿಗೆಯ ಜೊತೆಯಲ್ಲೇ ಮುಂದೆ ಮುಂದೆ ಬರುತ್ತಿದ್ದಂತೆ ದೂರದಲ್ಲಿ ಬಯಲಾಟದ ದೃಶ್ಯ ಕಂಡಿತು. ಒಡನೆಯೇ ರಾಜು, "ತಾತ ಅದೇನದು ಅಲ್ಲಿ ಕಾಣುತ್ತಿರುವುದು? ನಾವು ಅಲ್ಲಿಗೆ ಹೋಗೋಣ" ಎಂದನು. ಅದಕ್ಕೆ ತಾತ, "ಅದು ಯಕ್ಷಗಾನ ಬಯಲಾಟ. ಬನ್ನಿ ನಾವೆಲ್ಲ ಅಲ್ಲಿಗೆ ಹೋಗೋಣ" ಎಂದು ಜನರ ನಡುವೆ ದಾರಿ ಮಾಡಿಕೊಂಡು ರಂಗಸ್ಥಳದ ಮುಂದೆ ಬಂದರು.



"ಮಕ್ಕಳೇ, ನಾನು ನಿಮಗೆ ಹಲವು ಪುರಾಣ ಕಥೆಗಳನ್ನು ಹೇಳಿದ್ದೆನಲ್ಲವೇ? ಅಂಥ ಪುರಾಣ ಕಥೆಗಳನ್ನು, ವೇಷ, ಕುಣಿತ, ಮಾತು ಹಾಗೂ ಹಿಮ್ಮೇಳದೊಂದಿಗೆ ಆಡಿ ತೋರಿಸುವ ಕಲೆಯೇ ಯಕ್ಷಗಾನ ಬಯಲಾಟ. ಇದರಲ್ಲಿ ರಂಗಸ್ಥಳ, ಹಿಮ್ಮೇಳ, ಮುಮ್ಮೇಳ

ಮತ್ತು ಪ್ರಸಂಗ ಮುಖ್ಯ. ಅಲ್ಲಿ ನೋಡಿ! ಬಣ್ಣದ ನಾಲ್ಕು ಕಂಬಗಳಿಂದ ಸಿಂಗರಿಸಿರುವ ಆ ಎತ್ತರವಾದ ಜಾಗವೇ ರಂಗಸ್ಥಳ. ರಂಗಸ್ಥಳದ ಹಿಂಭಾಗದಲ್ಲಿ ಬಿಳಿ ಅಂಗಿ, ಬಿಳಿ ಪಂಚೆ, ಕೆಂಪು ಮುಂಡಾಸು ಧರಿಸಿ ಕುಳಿತಿದ್ದಾರಲ್ಲ ಅವರೇ ಹಿಮ್ಮೇಳದವರು. ಜಾಗಟೆ ಹಿಡಿದು ದನಿಯೆತ್ತಿ ಹಾಡುತ್ತಿರುವವರೇ ಭಾಗವತರು. ಭಾಗವತ ಯಕ್ಷಗಾನ ಬಯಲಾಟದ ಸೂತ್ರಧಾರ. ಯಕ್ಷಗಾನದ ಮೂಲಕ ಹೇಳುವ ಕಥಾ ಭಾಗವೇ ಪ್ರಸಂಗ. ಪ್ರಸಂಗದಲ್ಲಿ ಬರುವ ಪಾತ್ರಗಳನ್ನು ವೇಷ ಹಾಕಿ ಅಭಿನಯಿಸುವವರೇ ಮುಮ್ಮೇಳದವರು. ಈ ಕಲೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ" ಎಂದರು.

ಅಷ್ಟರಲ್ಲಿ ಭಾಗವತರು ಸ್ತುತಿ ಹಾಡು ಆರಂಭಿಸಿದರು. ತಾತ "ಮಕ್ಕಳೇ! ನೋಡಿ ಪ್ರಸಂಗ ಆರಂಭವಾಯಿತು. ಈ ದಿನದ ಪ್ರಸಂಗ 'ಶ್ರೀ ದೇವೀ ಮಹಾತ್ಮೆ' " ಎಂದರು. ಎಲ್ಲರೂ ಪ್ರಸಂಗ ನೋಡುತ್ತ ಸಂತೋಷಪಟ್ಟರು.

©KTBS NOT TO BE REPUBLISHED

## ಪದಗಳ ಅರ್ಥ

ಸಂಭ್ರಮ–ಖುಷಿ, ಸಂತೋಷ; ಕಂಗೊಳಿಸು–ಶೋಭಿಸು ; ನೆರೆ–ಸೇರು ; ಜಾತ್ರೆ–ಉತ್ಸವ, ಪರಿಸೆ; ಕುತೂಹಲ–ತವಕ; ಕಂಸಾಳೆ–ಕಂಚಿನ ತಾಳ; ಮಲೆ–ಬೆಟ್ಟ; ಮಧುರ–ಇಂಪಾದ; ನಾದ–ಧ್ವನಿ; ತಂಡ–ಗುಂಪು; ರಥ–ತೇರು; ಭಂಗಿ–ನಿಲುವು; ಭಿನ್ನ–ಬೇರೆ; ಒಡನೆ–ತಕ್ಷಣ; ಪ್ರಚಲಿತ–ರೂಢಿಯಲ್ಲಿನ; ಪುರಾಣ–ಹಿಂದಿನ; ಶೈಲಿ–ರೀತಿ; ಸಿಂಗರಿಸು–ಅಲಂಕರಿಸು; ಮುಂಡಾಸು–ಪೇಟ; ಅಭಿನಯಿಸು–ನಟಿಸು.

## ಟಿಪ್ಪಣಿ

| | | |
|---|---|---|
| ಕಂಚು | : | ಒಂದು ಮಿಶ್ರ ಲೋಹ |
| ಜೋಳಿಗೆ | : | ಹೆಗಲಿಗೆ ಹಾಕುವ ಬಟ್ಟೆಯ ಚೀಲ |
| ಚರ್ಮ ವಾದ್ಯ | : | ಚರ್ಮದಿಂದ ಸಿದ್ಧಪಡಿಸಿರುವ ಡೋಲು/ತಬಲ, ಮೃದಂಗದಂತಹ ಸಂಗೀತ ಉಪಕರಣಗಳು |
| ಲಯ | : | ಸಂಗೀತ, ನೃತ್ಯ, ಕಾವ್ಯಗಳಲ್ಲಿರುವ ಗತಿ |
| ದೇವರಗುಡ್ಡ | : | ಮೈಲಾರ ಲಿಂಗ, ಮಲೆಮಹದೇಶ್ವರ ಮುಂತಾದ ದೇವರ ಪೂಜೆಗೆ ಮೀಸಲಾದ ಆರಾಧಕರು |

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ರಥಬೀದಿ ಹೇಗೆ ಕಂಗೊಳಿಸುತ್ತಿತ್ತು?

೨. ಕಂಸಾಳೆ ಎಂದರೇನು?

೩. ದೇವರಗುಡ್ಡರು ಎಂದು ಯಾರನ್ನು ಕರೆಯುತ್ತಾರೆ?

೪. ಡೊಳ್ಳು ಎಂದರೇನು?

೫. ಡೊಳ್ಳು ಕುಣಿತದವರು ಯಾವ ದೇವರ ಭಕ್ತರು?

೬. ರಂಗಸ್ಥಳ ಎಂದರೇನು?

೭. ಯಾರನ್ನು ಭಾಗವತರೆಂದು ಕರೆಯುತ್ತಾರೆ?

NOT TO BE REPUBLISHED @KTBS

### ಆ) ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಬೀಸು ಕಂಸಾಳೆ ಎಂದರೇನು?

೨. ಕಂಸಾಳೆಯವರು ಹಾಡುತ್ತಾ ಹೇಗೆ ನರ್ತಿಸುತ್ತಾರೆ?

೩. ಡೊಳ್ಳು ಕುಣಿತವನ್ನು ಯಾವ ಯಾವ ಸಂದರ್ಭದಲ್ಲಿ ಮಾಡುತ್ತಾರೆ?

೪. ಯಕ್ಷಗಾನ ಬಯಲಾಟ ಎಂದರೇನು?

______________________________

______________________________

೫. ಯಕ್ಷಗಾನ ಬಯಲಾಟದ ಮುಖ್ಯ ಅಂಗಗಳಾವುವು?

______________________________

______________________________

## ಇ) ಈ ವಾಕ್ಯಗಳಲ್ಲಿ ಬಿಟ್ಟಿರುವ ಶಬ್ದಗಳನ್ನು ತುಂಬು.

೧. ರಾಜು ಮತ್ತು ಕಮಲ ____________ ಜೊತೆ ಜಾತ್ರೆಗೆ ಹೋದರು.

೨. ಜಾತ್ರೆಯಲ್ಲಿ ನೋಡಿದಲ್ಲೆಲ್ಲಾ ____________ ನೆರೆದಿತ್ತು.

೩. ಯಕ್ಷಗಾನ ಬಯಲಾಟದ ಅಂದಿನ ಪ್ರಸಂಗ ____________

೪. ಜಾತ್ರೆಯಲ್ಲಿ ಭಕ್ತರು ____________ ಎಳೆಯುತ್ತಿದ್ದರು.

## ಈ) ಹೊಂದಿಸಿ ಬರೆ.

| ಅ | ಆ | ಉತ್ತರ |
|---|---|---|
| ಡೊಳ್ಳು | ತಾಳವಾದ್ಯ | ......................... |
| ಕಂಸಾಳೆ | ಚಂಡೆ | ......................... |
| ಯಕ್ಷಗಾನ | ಚರ್ಮವಾದ್ಯ | ......................... |

## ಉ) ಈ ಮಾತುಗಳನ್ನು ಯಾರು? ಯಾರಿಗೆ ಹೇಳಿದರು ? ಎಂದು ಬರೆ.

೧. 'ಇವರು ಮಲೆಯ ಮಹದೇಶ್ವರನ ಭಕ್ತರಾದ ದೇವರ ಗುಡ್ಡರು'

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

೨. 'ತಾತ ಅದೇನದು ಅಲ್ಲಿ ಕಾಣುತ್ತಿರುವುದು'

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

@KTBS NOT TO BE REPUBLISHED

## ಸಾಮರ್ಥ್ಯಾಧಾರಿತ ಅಭ್ಯಾಸ

**ಅ) ಈ ಶಬ್ದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸು.**

೧. ಕುತೂಹಲ : ______________________

೨. ಬಾರಿಸು : ______________________

೩. ಭಿನ್ನಭಿನ್ನ : ______________________

೪. ಅಭಿನಯ : ______________________

**ಆ) ಇಲ್ಲಿನ ಮೂರು ಮನೆಗಳಲ್ಲಿರುವ ಪದಗಳನ್ನು ಕ್ರಮವಾಗಿ ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ಬರೆ.**

| | | |
|---|---|---|
| ನೀವು | | ಬರುತ್ತದೆ |
| ರಾಜು | | ಬಂದರು |
| ಕಮಲ | ಊರಿಗೆ | ಬಂದನು |
| ಅವರು | | ಬಂದಳು |
| ಅದು | | ಬನ್ನಿ |

| |
|---|
| ೧ |
| ೨ |
| ೩ |
| ೪ |
| ೫ |

NOT TO BE REPUBLISHED @KTBS

## ಭಾಷಾಭ್ಯಾಸ

**ಅ) ಇಲ್ಲಿ ಕೊಟ್ಟಿರುವ ವಿವರವು ನಡೆದು ಹೋಗಿರುವ ಘಟನೆಯದ್ದಾಗಿದೆ. ಅಡಿಗೆರೆ ಎಳೆದಿರುವ ಪದಗಳನ್ನು ಮಾತ್ರ ಬದಲಿಸಿ, ಮುಂದೆ ನಡೆಯಲಿರುವ ಘಟನೆಯಂತೆ ಬದಲಿಸಿ ಬರೆ.**

ರಾಜು ಓಟದ ಸ್ಪರ್ಧೆಯಲ್ಲಿ <u>ಓಡಿದನು.</u> ಸ್ಪರ್ಧೆಯಲ್ಲಿ <u>ಗೆದ್ದನು.</u> ಅವನಿಗೆ ಬಹುಮಾನ <u>ನೀಡಿದರು.</u>

ರಾಜು ಬಹುಮಾನ <u>ಪಡೆದುಕೊಂಡನು.</u> ಜನರು ಚಪ್ಪಾಳೆ <u>ತಟ್ಟಿದರು.</u> ರಾಜು ಸಂತೋಷದಿಂದ <u>ನಕ್ಕನು.</u>

______________________

______________________

______________________

ಪಾಠ ೧೨

# ಅನಾರೋಗ್ಯದ ಸಿಂಹ (ಪದ್ಯ)

L6W2G7

**ಸಾಮರ್ಥ್ಯ :** ಕಥನ ವಿವರಣೆ ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು.

**ಪ್ರವೇಶ :** 'ಕಥನ ಕವನ' ಎಂದರೆ ಘಟನೆಗಳನ್ನು / ಕಥೆಗಳನ್ನು ಪದ್ಯ ರೂಪದಲ್ಲಿ ಹೇಳುವುದು. ಇಲ್ಲಿ ಸಿಂಹದ ಅನಾರೋಗ್ಯದ ಕಥೆಯನ್ನು ಕವನ ರೂಪದಲ್ಲಿ ಹೇಳಲಾಗಿದೆ. ಇಲ್ಲಿ "ಉಪಾಯ ಬಲ್ಲವನಿಗೆ ಅಪಾಯವಿಲ್ಲ" ಎಂಬ ನೀತಿಯು ಇದೆ.

ಕಾಡಿನ ರಾಜ ಸಿಂಹರಾಯನು
ಕಾಯಿಲೆ ಬಿದ್ದನು ಕೇಳಿ ಕಥೆ
ಅನ್ನವು ಸೇರದು ನೀರೂ ಸೇರದು
ರಾಜನಿಗಾಯಿತು ಬಹಳ ವ್ಯಥೆ

@KTBS
NOT TO BE REPUBLISHED



ಅಡವಿಯಲಿರುವ ವೈದ್ಯರನ್ನೆಲ್ಲ
ಸರದಿಯಂತೆ ಅವ ಕರೆಸಿದನು
ಡಾ. ಜೀಬ್ರಾ ರಾಜನ ಪರೀಕ್ಷಿಸಿ
ಬಾಯನು ತೆಗೆಯಲು ಹೇಳಿದನು

ವೈದ್ಯರ ಆಜ್ಞೆಯ ಮೀರದ ಸಿಂಹ
ಬಾಯನು ತೆರೆದು ತೋರಿಸಿತು
"ದುರ್ವಾಸನೆಯ ಉಸಿರಿದೆ" ಎಂದು
ಡಾ. ಜೀಬ್ರಾ ಹೇಳಿದನು

ಹೀಗೆ ಹೇಳಲು ಎಂಥ ಧೈರ್ಯ
ಎನ್ನುತ ಸಿಂಹವು ಗರ್ಜಿಸಿತು
ಸತ್ಯವ ಹೇಳಿದ ವೈದ್ಯನನು
ಬೈದು ಹೊರಗಡೆ ಓಡಿಸಿತು



ಮುಂದಿನ ಸರದಿ ಡಾ. ಹೈನಾ
ಸಿಂಹದ ಬಾಗಿಲು ತಟ್ಟಿದಳು
ನಾಡಿಯ ಹಿಡಿದು ನೋಡಿದ ನಂತರ
ಬಾಯನು ತೆರೆಯಲು ಹೇಳಿದಳು

"ಎಂತಹ ಸುವಾಸನೆ ನಿಮ್ಮ ಉಸಿರಲಿ"
ಎನುತ ಮುಖವನು ನೋಡಿದಳು
ಸಿಂಹಕೆ ಕೋಪವು ನೆತ್ತಿಗೆ ಏರಿ
"ಮುಖಸ್ತುತಿ ಮಾಡುವಿ"ಎಂದಿತು

© KTBS NOT TO BE REPUBLISHED

ಇರುವ ಸತ್ಯವ ಹೇಳಲು ಹೆದರಿದ
ಹೈನಾಳನು ಹೊರ ಹಾಕಿಸಿತು
ನಂತರ ಸರದಿ ಜಾಣವೈದ್ಯ ನರಿ
ಬಾಗಿಲು ತಟ್ಟಿ ಒಳಬಂದಿತು

ಸಾರ್ವಭೌಮರ ಉಪಚರಿಸುತ್ತ
ಬಾಯನು ತೆರೆಯಲು ವಿನಂತಿಸಿತು
"ಉಸಿರನು ಕುರಿತು ಏನು ಹೇಳುವಿರಿ"
ಎನ್ನುತ ಬಾಯನು ತೆರೆಯಿತು.

ಚಾಣಾಕ್ಷ ನರಿಯು ತಕ್ಷಣ ಹೇಳಿತು
"ಶೀತದಿ ಮೂಗು ಕಟ್ಟಿದೆ ಒಡೆಯ
ವಾಸನೆ ಏನು ತಿಳಿಯದು ನನಗೆ"
ಎನ್ನುತ ಕೇಳಿತು ಕ್ಷಮೆಯನು

ಸಿಂಹದ ಕೋಪಕೆ ಬಲಿಯಾಗದೆ
ಪಾರಾಯಿತು ನರಿಯು
'ಉಪಾಯ ಬಲ್ಲವನಿಗೆ
ಅಪಾಯವಿಲ್ಲ' ಎನ್ನುವುದೆ ನೀತಿಯು

– ಅರುಣ ನರೇಂದ್ರ ಪಾಟೀಲ

© KTBS NOT TO BE REPUBLISHED

## ಪದಗಳ ಅರ್ಥ

ಅಡವಿ–ಕಾಡು, ಅರಣ್ಯ; ಆಜ್ಞೆ–ಅಪ್ಪಣೆ, ಆದೇಶ; ಕಾಯಿಲೆ–ವ್ಯಾಧಿ, ರೋಗ; ಚಾಣಾಕ್ಷ–ವ್ಯವಹಾರ ಚತುರ; ದುರ್ವಾಸನೆ–ಕೆಟ್ಟವಾಸನೆ; ಮುಖಸ್ತುತಿ–ಎದುರಿನಲ್ಲೇ ಪ್ರಶಂಸೆ ಮಾಡುವುದು, ಹೊಗಳುವುದು; ವೈದ್ಯ–ರೋಗಗಳಿಗೆ ಚಿಕಿತ್ಸೆ ಮಾಡುವವನು; ವ್ಯಥೆ–ನೋವು, ಯಾತನೆ; ಸರದಿ–ಪಾಳಿ, ಅನುಕ್ರಮ; ಸಾರ್ವಭೌಮ–ಚಕ್ರವರ್ತಿ, ಸಮಸ್ತ ಭೂಮಂಡಲಕ್ಕೆ ಅಧಿಪತಿಯಾದವನು.

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಕಾಡಿನರಾಜ ಸಿಂಹಕ್ಕೆ ಏನಾಯಿತು?

______________________________

೨. ಡಾ. ಜೀಬ್ರಾ ಕಾಡಿನ ರಾಜ ಸಿಂಹವನ್ನು ಪರೀಕ್ಷಿಸಿ ಏನೆಂದು ಹೇಳಿತು?

______________________________

೩. ಡಾ. ಹೈನಾ ಕಾಡಿನ ರಾಜ ಸಿಂಹವನ್ನು ಪರೀಕ್ಷಿಸಿ ಏನೆಂದು ಹೇಳಿತು?

________________________________

೪. ಜಾಣವೈದ್ಯ ನರಿ ಕಾಡಿನ ರಾಜ ಸಿಂಹವನ್ನು ಪರೀಕ್ಷಿಸಿ ಏನೆಂದು ಹೇಳಿತು?

________________________________

೫. ಈ ಪದ್ಯದ ನೀತಿಯೇನು?

________________________________

**ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.**

೧. ಕಾಡಿನರಾಜ ಸಿಂಹವು ವ್ಯಥೆಪಡಲು ಕಾರಣವೇನು?

________________________________

________________________________

೨. ಡಾ. ಜೀಬ್ರಾ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು? ಸಿಂಹವು ಏನು ಮಾಡಿತು?

________________________________

________________________________

೩. ಡಾ. ಹೈನಾ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು? ಸಿಂಹವು ಏನು ಮಾಡಿತು?

________________________________

________________________________

೪. ಜಾಣ ವೈದ್ಯ ನರಿ ಕಾಯಿಲೆ ಬಿದ್ದ ಕಾಡಿನ ರಾಜ ಸಿಂಹವನ್ನು ಹೇಗೆ ಪರೀಕ್ಷಿಸಿತು?

________________________________

________________________________

@KTBS NOT TO BE REPUBLISHED

## ಇ) ಸಮಾನಾರ್ಥಕ ಪದಗಳನ್ನು ಬರೆ.

ಅಡವಿ – ______________________

ಕಾಯಿಲೆ – ______________________

ದುರ್ವಾಸನೆ – ______________________

## ಈ) ಈ ಪದ್ಯವನ್ನು ಪೂರ್ಣಗೊಳಿಸು.

ಕಾಡಿನ ______________________

______________________

ಅನ್ನವು ______________________

______________________

## ಸಾಮರ್ಥ್ಯಾಧಾರಿತ ಚಟುವಟಿಕೆ

### ಅ) ಈ ಒಗಟುಗಳನ್ನು ಬಿಡಿಸಿ ಸರಿ ಉತ್ತರವನ್ನು ಆವರಣದಿಂದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ.
(ನಾಲಗೆ, ಮೀನು, ಕಮಲ)

@KTBS NOT TO BE REPUBLISHED

೧. ನೀರಲ್ಲೇ ಹುಟ್ಟುತ್ತದೆ.
ನೀರಲ್ಲೇ ಬೆಳೆಯುತ್ತದೆ.
ನೀರಲ್ಲೇ ಸಾಯುತ್ತದೆ. [ ]

೨. 'ನಾಡಿನ'ಲ್ಲಿ ಮೊದಲಿರುವೆ
'ಕೆಲಸ'ದಲ್ಲಿ ನಡುವಿರುವೆ
'ಕೊಡುಗೆ'ಯಲ್ಲಿ ಕಡೆಗಿರುವೆ
ನುಡಿ ನಾ ಯಾರೆಂದು? [ ]

೩. ನೀರಿನಲ್ಲಿದ್ದರೆ ಗಿಲಿಗಿಲಿ
ನೀರ ಹೊರಗಿದ್ದರೆ ವಿಲಿವಿಲಿ
ಕಡಲ ಕಾಗೆಗೆ ನಾ ಮಿರಿಮಿರಿ [ ]

**ಆ) ಈ ಕೆಳಗಿನ ಒಗಟುಗಳಿಗೆ ಉತ್ತರ ಬರೆ.**

೧. ಅಜ್ಜನ ದುಡ್ಡು ಎಣಿಸೋಕಾಗಲ್ಲ, ಅಜ್ಜಿಯ ಸೀರೆ ಮಡಿಸಕ್ಕಾಗಲ್ಲ.__________

೨. ಚಿನ್ನದ ಹಕ್ಕಿ ಬಾಲದಿಂದ ನೀರು ಕುಡಿಯುತ್ತದೆ. __________

೩. ಕಟ್ಟೆ ಇಲ್ಲದ ಕೆರೆಯಲ್ಲಿ ತಟ್ಟೆ ತೇಲಿಕೊಂಡು ಬರುತ್ತೆ. __________

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಜೋಡಿ ಅಕ್ಷರ/ಪದಗಳನ್ನು ಸ್ಪಷ್ಟವಾಗಿ ಉಚ್ಚಾರ ಮಾಡು. ಧ್ವನಿ ಹಾಗೂ ಅರ್ಥ ವ್ಯತ್ಯಾಸವನ್ನು ತಿಳಿ.**

ಅ – ಹ = ಅಕ್ಕಿ – ಹಕ್ಕಿ

ಆ – ಹಾ = ಆದಿ – ಹಾದಿ

ನ – ಣ = ಅನ್ನ – ಅಣ್ಣ

ಲ – ಳ = ಅಲೆ – ಅಳೆ

ಒ – ವ = ಒಡೆ – ವಡೆ

ದ – ಧ = ದನ – ಧನ

ಬಾ – ಭಾ = ಬಾನು – ಭಾನು

@KTBS
NOT TO BE REPUBLISHED



# ಪಾಠ ೧೩ ಹೊಯ್ಸಳ

– ಸಮಿತಿ ರಚನೆ

V3K1U6

**ಸಾಮರ್ಥ್ಯ:** ಅಪರಿಚಿತ ಸನ್ನಿವೇಶದಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವುದು.

**ಪ್ರವೇಶ :** ಪ್ರತಿಯೊಂದು ಪ್ರವಾಸಿ ತಾಣವೂ ತನ್ನದೇ ಆದ ವೈಶಿಷ್ಟ್ಯ ಹಾಗೂ ಇತಿಹಾಸವನ್ನು ಹೊಂದಿದೆ. ಆ ದೃಷ್ಟಿಯಲ್ಲಿ ಬೇಲೂರಿನ ವೈಶಿಷ್ಟ್ಯವನ್ನು ಈ ಪಾಠದ ಮೂಲಕ ತಿಳಿ.



(ಶಾಲಾ ಮಕ್ಕಳು ಪ್ರವಾಸಕ್ಕೆ ಹೊರಟರು. ಬಸ್ಸು ಬೇಲೂರನ್ನು ಸಮೀಪಿಸುತ್ತಿತ್ತು.)

**ವರುಣ** : ಗುರುಗಳೇ, ಅಲ್ಲಿ ಕಾಣಿಸುತ್ತಿರುವ ಊರು ಯಾವುದು?

**ಶಿಕ್ಷಕ** : ಅದು ಬೇಲೂರು.

**ರಮಾ** : ಅಲ್ಲಿರುವ ದೇವಾಲಯ ಯಾವುದು ಗುರುಗಳೇ?

**ಶಿಕ್ಷಕ** : ಅದು ಚೆನ್ನಕೇಶವ ದೇವಾಲಯ.

(ಅಷ್ಟರಲ್ಲಿ ಬಸ್ಸು ದೇವಾಲಯವನ್ನು ತಲುಪಿತು. ಬಸ್ಸಿನಿಂದಿಳಿದ ಮಕ್ಕಳು ಪ್ರಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ, ಅಲ್ಲಿನ ಶಿಲ್ಪಕಲೆಯನ್ನು ನೋಡಿ ಅಚ್ಚರಿಗೊಂಡರು.)



**ಶಂಕರ** : ಏ, ನೋಡ್ರೋ, ಈ ದೇವಾಲಯ ಎಷ್ಟು ದೊಡ್ಡದಾಗಿದೆ! ಪೂರ್ಣ ಕಲ್ಲಿನಿಂದಲೇ ಮಾಡಿದ್ದಾರೆ.

**ಶಿಕ್ಷಕಿ** : ಹೌದು ಶಂಕರ, ನೀನು ಹೇಳಿದ್ದು ಸರಿ. ಇಲ್ಲಿನ ಶಿಲ್ಪಕಲೆಯು ನೋಡಲು ತುಂಬಾ ಮೋಹಕವಾಗಿದೆ. ಬನ್ನಿ, ಹತ್ತಿರ ಹೋಗಿ ಅವುಗಳ ಬಗ್ಗೆ ತಿಳಿಯೋಣ.

**ಮಕ್ಕಳು** : ಆಗಲಿ ಗುರುಗಳೇ

**(ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ದೇವಾಲಯದತ್ತ ನಡೆದರು)**

@KTBS NOT TO BE REPUBLISHED

**ಶಿಕ್ಷಕ** : ಇಲ್ಲಿ ನೋಡಿ ಮಕ್ಕಳೇ, ನಾಲ್ಕು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲೆ ಈ ದೇವಾಲಯವು ನಿರ್ಮಾಣವಾಗಿದೆ.

**ಶಿಕ್ಷಕಿ** : ಈ ದೇವಾಲಯದ ಸುತ್ತಲಿನ ಮೂಲೆ ಮೂಲೆಗಳಲ್ಲಿ ತೊಲೆಗಳಿಗೆ ಅಂಟಿಕೊಂಡಿರುವಂತಹ ಮದನಿಕಾ ವಿಗ್ರಹಗಳು ತಮ್ಮ ಅಪೂರ್ವ ಸೌಂದರ್ಯದಿಂದ ನಯನ ಮನೋಹರವಾಗಿವೆ. ಇವು ಆಗಿನ ಕಾಲದ ಶಿಲ್ಪಿಗಳ ಕಲಾ ಚಾತುರ್ಯಕ್ಕೆ ನಿದರ್ಶನವಾಗಿವೆ.

**ಶಿಕ್ಷಕ** : ಮಕ್ಕಳೇ, ಬನ್ನಿ. ದೇವಾಲಯದ ಹೊರಗಡೆಯ ಸುತ್ತಲೂ ಇರುವ ಚಿತ್ರ ಪಟ್ಟಿಕೆಗಳನ್ನು ಹಾಗೂ ಕೆತ್ತನೆಗಳನ್ನು ನೋಡುವಾ. ಅವು ಹಲವು ಪೌರಾಣಿಕ ಘಟನೆಗಳನ್ನು ಹೇಳುತ್ತವೆ.

**(ಮಕ್ಕಳು ಪ್ರತಿಯೊಂದನ್ನು ಆಸಕ್ತಿಯಿಂದ ವೀಕ್ಷಿಸುತ್ತ ಮುಂದೆ ನಡೆದರು.)**

ವಿಶ್ವಾಸ್ : ಸರ್, ಅಲ್ಲಿ ನೋಡಿ, ಆ ಶಿಲ್ಪದಲ್ಲಿ ಒಬ್ಬ ಹುಡುಗ ಹುಲಿಯ ಬಾಯಿಗೆ ತಿವಿಯುತ್ತಿದ್ದಾನಲ್ಲಾ?

ಶಿಕ್ಷಕ : ಅದು ಸಳನು ಹುಲಿಯೊಡನೆ ಹೋರಾಡಿದ ಘಟನೆಯ ಶಿಲ್ಪ.

ಸ್ವಾತಿ : ಅಬ್ಬಾ! ಇದು ನಿಜವಾಗಿಯೂ ನಡೆದದ್ದೇ? ಮೇಡಂ.

ಶಿಕ್ಷಕಿ : ಹೌದು. ಇದರ ಬಗ್ಗೆ ತಿಳಿಯಲು ನಿಮಗೆ ತುಂಬಾ ಕುತೂಹಲ ವಾಗುತ್ತದೆಯಲ್ಲವೇ? ನಾನಿದರ ಬಗ್ಗೆ ತಿಳಿಸುತ್ತೇನೆ.

ಶಿಕ್ಷಕ : ಬನ್ನಿ, ಎಲ್ಲರೂ ಅಲ್ಲಿ ನೆರಳಿನಲ್ಲಿ ಕುಳಿತುಕೊಳ್ಳುವಾ.

(ಮಕ್ಕಳು ಸಂತೋಷದಿಂದ ಒಪ್ಪಿಗೆ ಸೂಚಿಸಿದರು. ಶಿಕ್ಷಕರು 'ಹೊಯ್ಸಳ ಲಾಂಛನ'ದ ಬಗ್ಗೆ ವಿವರಿಸಿದರು)

ಶಿಕ್ಷಕ : ಮೂಡಿಗೆರೆ ತಾಲೂಕಿನ 'ಅಂಗಡಿ' ಎಂಬ ಹಳ್ಳಿಗೆ ಹೊಂದಿಕೊಂಡಂತೆ ಒಂದು ದೊಡ್ಡ ಅಡವಿ ಇತ್ತು. ಅಲ್ಲಿದ್ದ ವಾಸಂತಿ ದೇವಿಯ ಗುಡಿಯಲ್ಲಿ ಜೈನಗುರು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು.

ವೇಣು : ಅಬ್ಬಾ! ಅಷ್ಟು ದೊಡ್ಡ ಕಾಡಿನಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರೇ?

ಶಿಕ್ಷಕ : ಹೌದು. ಒಂದು ದಿನ ಗುರುಗಳು ಪಾಠ ಮಾಡುತ್ತಿರುವಾಗ ಒಂದು ಹೆಬ್ಬುಲಿಯು ಆರ್ಭಟಿಸುತ್ತಾ ಅಲ್ಲಿಗೆ ಬಂತು. ಗುಡಿಯೊಳಗಿದ್ದ ಶಿಷ್ಯರು ಹೌಹಾರಿದರು. ಹೆದರಿ ಹೊರಗೋಡಿದರು.

ಶಾಲಿನಿ : ಮತ್ತೆ....... ಗುರುಗಳು?

ಶಿಕ್ಷಕಿ : ಶಿಷ್ಯರಲ್ಲಿ ಒಬ್ಬನಾದ ಸಳನು ಗುರುಗಳ ರಕ್ಷಣೆಗೆ ನಿಂತನು. ಗುರುಗಳು ಅವನ ಕೈಗೆ ಒಂದು ಕಬ್ಬಿಣದ ಸಲಾಕೆಯನ್ನು ಕೊಟ್ಟು 'ಹೊಯ್ ಸಳ' 'ಹೊಯ್ ಸಳ' ಎಂದು ಕೂಗಿ ಹೇಳಿದರು. ಕಲಿಯೂ ಬಲಶಾಲಿಯೂ ಆದ ಸಳನು ಸ್ವಲ್ಪವೂ ಹೆದರದೆ ಸಲಾಕೆಯಿಂದ ಹುಲಿಯನ್ನು ಮಣಿಸಿದನು. ಆನಂತರ ಆ ಸಲಾಕೆಯನ್ನು ಹುಲಿಯ ಬಾಯಲ್ಲಿ ತೂರಿಸಿ ಅದನ್ನು ಕೊಂದು ಹಾಕಿದನು.

ದರ್ಶನ್ : ಅಬ್ಬಾ! ಸಳನು ಎಷ್ಟು ಧೈರ್ಯಶಾಲಿ ಅಲ್ಲವೇ ಟೀಚರ್?

ಶಿಕ್ಷಕ : ಹೌದು, ಸಳನು ಹುಲಿಯನ್ನು ಮಣಿಸಿದ ಸುದ್ದಿ ಗ್ರಾಮದಲ್ಲೆಲ್ಲಾ ಹರಡಿತು. ಜನರು ಗುಂಪಾಗಿ ಬಂದು 'ಭಲೇ ಸಳ, ಒಳ್ಳೆಯ ಕೆಲಸ ಮಾಡಿದೆ' ಎಂದು ಹೊಗಳಿದರು.

@KTBS NOT TO BE REPUBLISHED

**ಸ್ಫೂರ್ತಿ** : ಆಮೇಲೆ ಏನಾಯ್ತು ಗುರುಗಳೇ?

**ಶಿಕ್ಷಕಿ** : ಆಗ ಗುರುಗಳು "ಈ ವೀರನನ್ನು ನೀವು ನಿಮ್ಮ ದೊರೆಯನ್ನಾಗಿ ಮಾಡಿಕೊಳ್ಳಿ. ಇವನು ನಿಮ್ಮೆಲ್ಲರನ್ನೂ ಕಾಪಾಡುವನು" ಎಂದರು. ಜನರು ಸಂತೋಷದಿಂದ ಇಂದಿನಿಂದ "ಈತನೇ ನಮಗೆ ದೊರೆ" ಎಂದು ಹೇಳಿ ಜಯಕಾರ ಮಾಡಿದರು.

**ಸುಪ್ರೀತ** : ಮುಂದೆ.....?

**ಶಿಕ್ಷಕ** : ಮುಂದೆ ಸಳನ ದೊರೆತನದಲ್ಲಿ ರಾಜ್ಯ ಸ್ಥಾಪನೆಯಾಯಿತು. ಅವನು ಹುಲಿಯನ್ನು ಮಣಿಸಿದ ಘಟನೆಯೇ ಆ ವಂಶದ ಲಾಂಛನವಾಯಿತು ಹಾಗೂ ಗುರುಗಳು ಹೇಳಿದ 'ಹೊಯ್ಸಳ' ಎಂಬ ನುಡಿಯಿಂದಲೇ ಅವನ ವಂಶವು ಪ್ರಸಿದ್ಧವಾಯಿತು.

**ವರುಣ** : ಗುರುಗಳೇ, ಆ ಲಾಂಛನ ಇಲ್ಲಿ ಏಕೆ ಇದೆ?

**ಶಿಕ್ಷಕಿ** : ಏಕೆಂದರೆ ಈ ದೇವಾಲಯವು ಇವನ ವಂಶದವನೇ ಆದ ವಿಷ್ಣುವರ್ಧನನಿಂದ ನಿರ್ಮಾಣವಾಯಿತು. ಆದ್ದರಿಂದ ಆ ವಂಶದ ಲಾಂಛನವನ್ನು ಇಲ್ಲಿ ಕೆತ್ತಲಾಗಿದೆ. ಇವನಲ್ಲದೆ ಈ ವಂಶದ ಅನೇಕ ರಾಜರು ಕಲೆ–ಸಾಹಿತ್ಯಕ್ಕಾಗಿ ಗಣನೀಯ ಸೇವೆ ಸಲ್ಲಿಸಿದರು. ಹಲವು ಸುಂದರ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದರು. ಇವರಿಂದ ನಿರ್ಮಾಣಗೊಂಡ ಬೇಲೂರು, ಹಳೇಬೀಡು ಹಾಗೂ ಸೋಮನಾಥಪುರ ದೇವಾಲಯಗಳು ಪ್ರಸಿದ್ಧವಾದವು.

**ಶಿಕ್ಷಕ** : ಬನ್ನಿ ಮಕ್ಕಳೇ, ಈಗ ಎಲ್ಲರೂ ದೇವಾಲಯದ ಒಳಗೆ ಹೋಗೋಣ. ಇದರ ಬಗ್ಗೆ ಮತ್ತಷ್ಟು ವಿಚಾರಗಳನ್ನು ತಿಳಿಯೋಣ.

*(ಎಲ್ಲರೂ ದೇವಾಲಯದ ಒಳಗೆ ನಡೆದರು)*

## ಪದಗಳ ಅರ್ಥ

ಪ್ರಾಂಗಣ – ಅಂಗಣ ; ನಿರ್ಮಾಣ – ಸೃಷ್ಟಿ, ರಚನೆ ; ಅಪೂರ್ವ – ವಿಶೇಷ, ಹಿಂದಿಲ್ಲದ; ನಯನ – ಕಣ್ಣು ; ಮನೋಹರ – ಆಕರ್ಷಣೀಯ, ಬಹುಸುಂದರವಾದ, ಲಾಂಛನ – ಗುರುತು, ಮುದ್ರೆ, ಚಿಹ್ನೆ ; ಆರ್ಭಟಿಸು – ಗಟ್ಟಿಯಾಗಿ ಕೂಗು, ಅಬ್ಬರಿಸು ; ಹೌಹಾರು – ಬೆಚ್ಚಿಬೀಳು ; ದೊರೆ – ರಾಜ, ಅರಸ ; ಪ್ರಸಿದ್ಧ – ಕೀರ್ತಿ, ಖ್ಯಾತ ; ತೊಲೆ – ಮರದ ದಿಮ್ಮಿ ; ಹೊಯ್ – ಹೊಡೆ ; ಮಣಿಸು – ಸೋಲಿಸು.

## ಟಿಪ್ಪಣಿ

ಮೋಹಕ – ಮನಸ್ಸನ್ನು ಸೆರೆಹಿಡಿಯುವ

ಮದನಿಕಾ ವಿಗ್ರಹಗಳು – ಶಿಲಾ ಕಂಬಗಳಲ್ಲಿ ಜೋಡಿಸಿರುವ ಸ್ತ್ರೀ ಶಿಲ್ಪಗಳು

ಚಿತ್ರ ಪಟ್ಟಿಕೆ – ಪಟ್ಟಿಕೆಯ ರೂಪದಲ್ಲಿ ಜೋಡಿಸಿರುವ ಶಿಲ್ಪಗಳು

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ಬೇಲೂರಿನಲ್ಲಿರುವ ದೇವಾಲಯ ಯಾವುದು?

________________________________________

೨. 'ಅಂಗಡಿ' ಎಂಬ ಹಳ್ಳಿ ಎಲ್ಲಿದೆ?

________________________________________

೩. ಹುಲಿಯ ಬಾಯಿಗೆ ಸಲಾಕೆಯಿಂದ ತಿವಿದ ಬಾಲಕ ಯಾರು?

________________________________________

೪. ಹೊಯ್ಸಳ ಲಾಂಛನವು ಯಾವ ಘಟನೆಯನ್ನು ತಿಳಿಸುತ್ತದೆ?

________________________________________

೫. ಸಳನಿಗೆ 'ಹೊಯ್ ಸಳ' ಎಂದು ಯಾರು ಹೇಳಿದರು?

________________________________________

೬. ಚೆನ್ನಕೇಶವ ದೇವಾಲಯವನ್ನು ಯಾರು ಕಟ್ಟಿಸಿದರು?

________________________________________

### ಆ) ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಸಳನ ಮನೆತನಕ್ಕೆ ಹೊಯ್ಸಳ ಎಂಬ ಹೆಸರು ಹೇಗೆ ಬಂತು?

________________________________________

________________________________________

@KTBS NOT TO BE REPUBLISHED

೨. ಜನರು ಸಳನನ್ನು ತಮ್ಮ ದೊರೆ ಎಂದು ಒಪ್ಪಲು ಕಾರಣವೇನು?

______________________________

______________________________

೩. ಹೊಯ್ಸಳರಿಂದ ನಿರ್ಮಾಣಗೊಂಡ ಪ್ರಸಿದ್ಧ ದೇವಾಲಯಗಳು ಯಾವುವು?

______________________________

______________________________

## ಇ) ಈ ಮಾತನ್ನು ಯಾರು ಯಾರಿಗೆ ಹೇಳಿದರು? ಬರೆ.

೧. "ಗುರುಗಳೇ, ಅಲ್ಲಿ ಕಾಣುತ್ತಿರುವ ಊರು ಯಾವುದು?"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

೨. "ಈ ವೀರನನ್ನು ನೀವು ನಿಮ್ಮ ದೊರೆಯನ್ನಾಗಿ ಮಾಡಿಕೊಳ್ಳಿ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

೩. "ಭಲೇ ಸಳ ! ಒಳ್ಳೆಯ ಕೆಲಸ ಮಾಡಿದೆ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

@KTBS NOT TO BE REPUBLISHED

## ಈ) ಕೊಟ್ಟಿರುವ ವಾಕ್ಯಗಳನ್ನು ಸರಿಪಡಿಸಿ ಬರೆ.

೧. ಈ ದೇವಾಲಯವು ನಿರ್ಮಾಣವಾಗಿದೆ ನಕ್ಷತ್ರಾಕಾರದ ಜಗಲಿಯ ಮೇಲೆ

______________________________

೨. ರಕ್ಷಣೆಗೆ ನಿಂತನು ಗುರುಗಳ ಸಳನು

______________________________

೩. ಹುಲಿಯನ್ನು ಕೊಂದ ಸುದ್ದಿ ಸಳನು ಹರಡಿತು ಗ್ರಾಮದಲ್ಲೆಲ್ಲಾ

______________________________

ಉ) ಈ ವಾಕ್ಯಗಳು ಸರಿ ಇದ್ದರೆ (✓) ಎಂದೂ, ತಪ್ಪಿದ್ದರೆ ತಪ್ಪು (×) ಎಂದೂ ಗುರುತಿಸಿ.

೧. ಸಳನು ಹುಲಿಯನ್ನು ಕಂಡು ಹೆದರಿದನು. (   )

೨. ವಾಸಂತಿ ದೇವಿಯ ಗುಡಿಯಲ್ಲಿ ಜೈನಗುರು ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. (   )

೩. ಬೇಲೂರಿನಲ್ಲಿರುವುದು ಚೆನ್ನಕೇಶವ ದೇವಾಲಯ. (   )

೪. ಗುರುಗಳು ಹುಲಿಯನ್ನು ಕೊಂದರು. (   )

## ಸಾಮರ್ಥ್ಯಾಧಾರಿತ ಅಭ್ಯಾಸ

**ಪಠ್ಯವನ್ನು ಓದಿ ಸಂಭಾಷಣೆಗಳನ್ನು ಅರ್ಥಮಾಡಿಕೊಂಡು ಪ್ರಶ್ನೆಗಳಿಗೆ ನಿನ್ನ ನೋಟ್ ಪುಸ್ತಕದಲ್ಲಿ ಉತ್ತರಿಸು.**

೧. ಬಸ್ಸಿನಲ್ಲಿ ನಡೆದ ಸಂಭಾಷಣೆಯಲ್ಲಿ ಭಾಗವಹಿಸಿದವರು ಯಾರು ಯಾರು?

೨. ದೇವಾಲಯದ ಪ್ರಾಂಗಣದಲ್ಲಿ ಯಾವ ವಿಷಯದ ಬಗ್ಗೆ ಮಾತುಕತೆ ನಡೆಯಿತು?

೩. ಹೊಯ್ಸಳ ಲಾಂಛನದ ಬಗ್ಗೆ ವಿವರಣೆ ನೀಡಿದವರು ಯಾರು?

©KTBS NOT TO BE REPUBLISHED

## ಭಾಷಾ ಚಟುವಟಿಕೆ

ಅ) ಮಾದರಿಯಂತೆ ಕೂಡಿಸಿ ಬರೆ.

**ಮಾದರಿ : ಹಣ + ವಂತ = ಹಣವಂತ**

ಧೈರ್ಯ + ವಂತ = ____________

ಬುದ್ಧಿ + ವಂತ = ____________

ಗುಣ + ವಂತ = ____________

ಶೀಲ + ವಂತ = ____________

ಛಲ + ವಂತ = ____________

ಆ) ಕೊಟ್ಟಿರುವ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕು.

೧. ಆಹಾ ಈ ಜಲಪಾತವು ಎಷ್ಟು ಅದ್ಭುತವಾಗಿದೆ

೨. ಗುರುಗಳೇ ರಸ್ತೆ ಅಪಘಾತಗಳನ್ನು ತಪ್ಪಿಸಲು ಸಾಧ್ಯವಿಲ್ಲವೇ

೩. ಮಾವಿನ ತೋಪಿಗೆ ರಂಗ ರವಿ ರಾಜು ಹಾಗೂ ರಾಮ ಹೋದರು

# ಪಾಠ ೧೪ ರಾಜನ ಸುಪ್ರಭಾತ (ಪದ್ಯ)

S3M6I9

**ಸಾಮರ್ಥ್ಯ :** ಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು.

**ಪ್ರವೇಶ :** ನೀನು ಪೆನ್ನು, ಬೆಂಚು, ಪುಸ್ತಕ, ಮಿಠಾಯಿ ಇತ್ಯಾದಿ ವಸ್ತುಗಳ ಬಗ್ಗೆ ತಿಳಿದಿರುವೆ. ಅವುಗಳಲ್ಲಿ ನಿನಗಿಷ್ಟವಾದ ಯಾವುದಾದರು ಒಂದು ವಸ್ತುವಿನ ಬಗ್ಗೆ ನಿನ್ನ ಮಾತುಗಳಲ್ಲಿ ಹೇಳು.

ಮುಂಗೋಳಿ ಕೂಗುವುದು ಮುಂಬೆಳಕು ಮೂಡುವುದು
ಚಾಪೆಯಿಂದೆದ್ದೇಳು ರಾಜಾ ನಮ್ಮ ರಾಜಾ

ಸುಖ ನಿದ್ದೆ ಸಾಕಿನ್ನು ಸ್ವಪ್ನಕ್ಕೆ ಬೈ ಎನ್ನು
ಕಣ್ಣುಗಳ ತೆರೆದುಕೋ ರಾಜಾ ನಮ್ಮ ರಾಜಾ

ಕೈಕಾಲು ಮುಖ ತೊಳೆದು ಪಾಠ ಪುಸ್ತಕ ತೆಗೆದು
ಅಭ್ಯಾಸ ಮಾಡಯ್ಯ ರಾಜಾ ನಮ್ಮ ರಾಜಾ

ಚೆನ್ನಾಗಿ ಮಿಂದು ಬಾ ಸಮವಸ್ತ್ರ ತೊಟ್ಟುಬಾ
ತಿಂಡಿ ತಿನ್ನಲು ಕೂಡು ರಾಜಾ ನಮ್ಮ ರಾಜಾ

ಶೂಗಳನು ಕಟ್ಟಿಕೊ ಚೀಲವನು ಎತ್ತಿಕೋ
ಶಾಲೆಕಡೆ ಹೆಜ್ಜೆಯಿಡು ರಾಜಾ ನಮ್ಮ ರಾಜಾ

ನಿಜವೆಂದ್ರೆ ನನ್ನವ್ವ ಈವತ್ತು ರವಿವಾರ
ಶಾಲೆಗೆ ರಜಾ ಎನುವ ರಾಜಾ ನಮ್ಮ ರಾಜಾ

ಅಕಟಕಟ! ವಾರಕ್ಕೆ ಒಂದೆ ರವಿವಾರಕಣ
ಅದು ನಿನ್ನೆಗಾಯಿತ್ತು ರಾಜಾ ನಮ್ಮ ರಾಜಾ!

– ಕೆ.ವಿ. ತಿರುಮಲೇಶ್

© KTBS NOT TO BE REPUBLISHED

## ಪದಗಳ ಅರ್ಥ

ಮೂಡು – ಹುಟ್ಟು, ಉದಯಿಸು, ಸ್ವಪ್ನ – ಕನಸು, ಕಣ್ಣು – ನಯನ, ನೇತ್ರ, ಪುಸ್ತಕ – ಹೊತ್ತಿಗೆ, ಮಿಂದು – ಸ್ನಾನಮಾಡಿ, ತೊಟ್ಟು – ಧರಿಸಿ, ಈವತ್ತು – ಈ ದಿನ, ರವಿವಾರ – ಭಾನುವಾರ

## ಟಿಪ್ಪಣಿ

ಮುಂಗೋಳಿ – ಮುಂಜಾವದಲ್ಲಿ ಕೂಗುವ ಕೋಳಿ.

ಮುಂಬೆಳಕು – ಮುಂಜಾನೆಯ ಬೆಳಕು.

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಮುಂಜಾನೆ ಕೂಗುವುದು ಏನು ?

______________________________

೨. ಯಾವುದಕ್ಕೆ ಸಾಕೆನ್ನಬೇಕು ?

______________________________

೩. ರಾಜಾ ಪಾಠಪುಸ್ತಕ ತೆಗೆದು ಏನು ಮಾಡಬೇಕು?

______________________________

೪. ಚೆನ್ನಾಗಿ ಮಿಂದು ಏನನ್ನು ತೊಟ್ಟು ಬರಬೇಕು ?

______________________________

೫. ರಾಜಾ ಯಾವಕಡೆಗೆ ಹೆಜ್ಜೆ ಇಡಬೇಕು ?

______________________________

೬. ಶಾಲೆಗೆ ಯಾವ ವಾರ ರಜಾ ಇದೆ ?

______________________________

@KTBS NOT TO BE REPUBLISHED

ಆ) ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿ.

೧. ಮುಂಗೋಳಿ ಕೂಗುವುದು ____________ ಮೂಡುವುದು.

೨. ಕಣ್ಣುಗಳ ____________ ರಾಜಾ ನಮ್ಮ ರಾಜಾ.

೩. ಚೆನ್ನಾಗಿ ಮಿಂದು ಬಾ ____________ ತೊಟ್ಟು ಬಾ.

೪. ____________ ಹೆಜ್ಜೆಯಿಡು ರಾಜಾ ನಮ್ಮ ರಾಜಾ.

೫. ವಾರಕ್ಕೆ ಒಂದೆ ____________ ಕಣ.

## ಸಾಮರ್ಥ್ಯಾಧಾರಿತ ಅಭ್ಯಾಸ

ಅ) ಇಲ್ಲಿ ನೀಡಿರುವ ಶಬ್ದಗಳಿಗೆ ಮಾದರಿಯಂತೆ ಬರೆ.

ಮಾದರಿ : **ಕಣ್ಣು – ಕಣ್ಣುಗಳು**

೧. ಪುಸ್ತಕ : __________

೨. ಶಾಲೆ : __________

೩. ಹೂ : __________

೪. ಚೀಲ : __________

@KTBS NOT TO BE REPUBLISHED

ಆ) ಕೆಳಗೆ ನೀಡಿರುವ ವಸ್ತುಗಳ ಬಗ್ಗೆ ಎರಡೆರಡು ವಾಕ್ಯಗಳನ್ನು ಬರೆ.

೧. ಬೆಳಕು : ________________________


________________________

೨. ತೊಳೆ : ________________________

________________________

೩. ಹೆಜ್ಜೆ : ________________________

ಇ) ನೀಡಿರುವ ಚಿತ್ರವನ್ನು ನೋಡಿ ವಾಕ್ಯಗಳನ್ನು ರಚಿಸು.



@KTBS NOT TO BE REPUBLISHED

## ಭಾಷಾಭ್ಯಾಸ

ಅ) ಈ ವಾಕ್ಯದಲ್ಲಿ ಬರುವ ಲಿಂಗ ಸೂಚಕ ಪದಗಳನ್ನು ಗಮನಿಸಿ ಬಿಟ್ಟಿರುವ ಸ್ಥಳವನ್ನು ತುಂಬು.

ಮಾದರಿ: ರಾಜ ಕೈಕಾಲು ತೊಳೆಯುವನು.
ರಾಣಿ ಕೈಕಾಲು ತೊಳೆಯುವಳು.

೧. ಬಾಲಕ ಕಣ್ಣು ತೆರೆಯುವನು.
________ ಕಣ್ಣು ತೆರೆಯುವಳು.

೨. ಗೆಳೆಯ ಸಮವಸ್ತ್ರ ತೊಡುವನು.
________ ಸಮವಸ್ತ್ರ ತೊಡುವಳು.

೩. ಅವನು ಚೀಲ ಎತ್ತಿಕೊಂಡನು.
________ ಚೀಲ ಎತ್ತಿಕೊಂಡಳು.

೪. ಅಣ್ಣ ಶಾಲೆಗೆ ಹೋದನು.
________ ಶಾಲೆಗೆ ಹೋದಳು.

## ಭಾಷಾ ಚಟುವಟಿಕೆ

### ಅ) ಪದಗಳನ್ನು ಹೊಂದಿಸಿ ಬರೆ.

| ಅ | ಆ | |
|---|---|---|
| ಮುಂಗೋಳಿ | ರವಿವಾರ | ______________ |
| ಸ್ವಪ್ನಕ್ಕೆ | ತೊಟ್ಟುಬಾ | ______________ |
| ಸಮವಸ್ತ್ರ | ಹೆಜ್ಜೆಯಿಡು | ______________ |
| ಶಾಲೆಕಡೆ | ಬೈಎನ್ನು | ______________ |
| ಈವತ್ತು | ಕೂಗುವುದು | ______________ |

### ಆ) ಈ ಶಬ್ದಗಳಿಗೆ ಮಾದರಿಯಂತೆ ಪ್ರಾಸಪದ ಬರೆಯಿರಿ.

**ಮಾದರಿ :** ಮೂಡು – ಮಾಡು, ಹಾಡು, ಕಾಡು

ತೊಳೆ – ______ ______ ______

ತಿಂಡಿ – ______ ______ ______

ಮಿಂದು– ______ ______ ______

ರಜಾ – ______ ______ ______

### ಇ) ಬಿಡಿಸಿ ಬರೆದಿರುವುದನ್ನು ಜೋಡಿಸಿ ಬರೆ.

**ಮಾದರಿ:** ಚಾಪೆಯಿಂದ + ಎದ್ದೇಳು = ಚಾಪೆಯಿಂದೆದ್ದೇಳು.

ಹೆಜ್ಜೆ + ಇಡು = ______________

ನಿಜ + ಅಂದ್ರೆ = ______________

ನಿನ್ನೆಗೆ + ಆಯಿತ್ತು = ______________



@KTBS NOT TO BE REPUBLISHED

ಪಾಠ ೧೫ 

# ಆಡೋಣ ಬಾ

– ಸಮಿತಿ ರಚನೆ

U8S7T6

**ಸಾಮರ್ಥ್ಯ :** ಆಟಗಳನ್ನು ಆಡುವ ಬಗ್ಗೆ ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವುದು.

**ಪ್ರವೇಶ :** ಆಟಗಳನ್ನು ಕಲಿಯಲು, ಗೊಂದಲವಿಲ್ಲದೆ ಆಡಲು ನಿಯಮಗಳನ್ನು ಅರಿಯಬೇಕು. ಈ ಆಟವನ್ನು ಗಮನಿಸು. ನಿಯಮಗಳನ್ನು ತಿಳಿದು ಸೂಚನೆಗಳನ್ನು ಅನುಸರಿಸಿ ಗೆಳೆಯರೊಡನೆ ಆಡು.

ಕಿಶೋರ ಜೋರಾಗಿ ಅಳುವ ಸದ್ದಿಗೆ ಅವನ ಅಜ್ಜ ಹೊರಗೆ ಬಂದರು. ಅಳಲು ಕಾರಣ ಏನೆಂದು ಕೇಳಿದಾಗ, ಪ್ರಮೀಳಕ್ಕ ತನ್ನನ್ನು ಆಟಕ್ಕೆ ಸೇರಿಸಿಕೊಳ್ಳುತ್ತಿಲ್ಲ ಎಂದು ದೂರಿದನು.

**ಅಜ್ಜ :** ಪ್ರಮೀಳ, ತಮ್ಮನನ್ನು ಕರೆದುಕೊಂಡು ಆಡಬಾರದೇಕೆ?

**ಪ್ರಮೀಳ :** ಅಜ್ಜಾ, ನಾನು ಕುಂಟೆಬಿಲ್ಲೆ ಆಡೋದು. ಆಡೋಕೆ ಪದ್ಮ ಬರುತ್ತಾಳೆ. ಕಿಶೋರನಿಗೆ ಕುಂಟೆಬಿಲ್ಲೆ ಆಡಲು ಬರುವುದಿಲ್ಲ. ನಾನು ಹೇಗೆ ಅವನನ್ನು ಆಟಕ್ಕೆ ಸೇರಿಸಿಕೊಳ್ಳಲಿ?

**ಅಜ್ಜ :** ಕಿಶೋರನ ಜೊತೆ ಆಡುವವರು ಯಾರೂ ಇಲ್ಲ. ಅವನಿಗೆ ನಾನು ಆಟ ಹೇಳಿ ಕೊಡುವೆ.

**ಕಿಶೋರ :** (ಕುಣಿದು ಕುಪ್ಪಳಿಸಿ) ಓ.. ಅಜ್ಜ ಆಟ ಹೇಳಿ ಕೊಡ್ತಾರೆ! ಕುಂಟೆಬಿಲ್ಲೆ ಆಟ ಅಂದ್ರೆ ನನಗೆ ತುಂಬಾ ಇಷ್ಟ! ಅಜ್ಜಾ, ನೋಡು ಆಟಕ್ಕೆ ಬಿಲ್ಲೆ ಸಿದ್ಧ ಮಾಡ್ಕೊಂಡಿದ್ದೀನಿ.

**ಪ್ರಮೀಳ :** ಕಿಶೋರ, ಬಿಲ್ಲೆ ನಯವಾಗಿ ದುಂಡಾಗಿರಬೇಕು. ಇಲ್ಲವಾದರೆ ಕಾಲಿನಿಂದ ತಳ್ಳುವಾಗ ಗಾಯವಾಗುತ್ತೆ. ಆಟ ಆಡುವಾಗ ಅವಸರ ಮಾಡಬಾರದು.

**ಅಜ್ಜ :** ಕಿಶೋರ, ಅಕ್ಕ ಹೇಳಿದ್ದು ಸರಿ. ಅವಳ ಸೂಚನೆಯನ್ನು ಪಾಲಿಸಬೇಕು, ಆಯ್ತಾ?

**ಕಿಶೋರ :** ಆಯ್ತು. ಆದರೆ ಸೂಚನೆ ಅಂದ್ರೆ ಏನು?


**ಅಜ್ಜ :** ಸೂಚನೆ ಅಂದ್ರೆ ಏನನ್ನು ಮಾಡಬೇಕು, ಹೇಗೆ ಮಾಡಬೇಕು, ಏನನ್ನು ಮಾಡಬಾರದು ಅನ್ನುವ ಹೇಳಿಕೆಗಳು. ಈಗ ಹೇಳು, ಸೂಚನೆಗಳನ್ನು ಸರಿಯಾಗಿ ಪಾಲಿಸುತ್ತೀಯಲ್ಲವೇ?

© KTBS NOT TO BE REPUBLISHED

**ಕಿಶೋರ :** ಆಯ್ತು ಅಜ್ಜ. ಈಗ ಕುಂಟೆಬಿಲ್ಲೆ ಅಂಕಣ ಬರೆಯೋಣವೇ?

**ಅಜ್ಜ :** ಓಹೋ, ಕಿಶೋರನಿಗೆ ಎಷ್ಟು ಆತುರ! ಆಗಲಿ. ಗಮನವಿಟ್ಟು ಕೇಳು. ಮೊದಲು ನೆಲದ ಮೇಲೆ ಎಡಬಲಕ್ಕೆ ಹೊಂದಿಕೊಂಡಂತೆ ತಲಾ ನಾಲ್ಕು ಚೌಕಗಳು ಬರುವಂತೆ ಎಂಟು ಚೌಕಗಳನ್ನು ಬರೆ. ಎರಡೂ ಸಾಲಿನ ಕೊನೆಯ ಎರಡು ಚೌಕಗಳು ವಿಶ್ರಾಂತಿಗಾಗಿ ಇರುವ ಚೌಕಗಳು. ಇವುಗಳನ್ನು ಮೂಲೆಯಿಂದ ಮೂಲೆಗೆ ಬರೆದು ಗುರುತಿಸು.

*(ಅಜ್ಜ ತಿಳಿಸಿದಂತೆ ಕಿಶೋರ ಖುಷಿಯಿಂದ ಅಂಕಣ ಬರೆಯಲು ತೊಡಗಿದ. ಪ್ರಮೀಳ ಅವನಿಗೆ ಸಹಾಯ ಮಾಡಿದಳು)*



**ಪ್ರಮೀಳ :** ಅಜ್ಜಾ, ನೀನೂ ಈ ಆಟ ಆಡಿರುವೆಯಾ?

**ಅಜ್ಜ :** ಓಹೋ, ನಾನೂ ಆಡಿದ್ದೆ. ನಮ್ಮ ಕಾಲದಲ್ಲಿ ಇನ್ನೂ ಎಷ್ಟೋ ಬೇರೆ ಬೇರೆ ಆಟಗಳು ಇದ್ದವು. ಕಲ್ಲೋ ಮಣ್ಣೋ, ಚಿಣ್ಣಿದಾಂಡು, ಓಟದ ಆಟ, ಮರಕೋತಿ ಆಟ ಮುಂತಾದ ಹೊರಾಂಗಣ ಆಟಗಳೂ, ಅಣ್ಣೆಕಲ್ಲು, ಚೌಕಾಬಾರಾ, ಉದ್ದಿನ ಮೂಟೆ ಮುಂತಾದ ಒಳಾಂಗಣ ಆಟಗಳೂ ಇದ್ದವು. ಸದ್ಯಕ್ಕೆ ಈಗ ಈ ಆಟ ಆಡೋಣ.

**ಕಿಶೋರ :** ಆಯ್ತು. ಇನ್ನೊಮ್ಮೆ ಆ ಆಟಗಳನ್ನೂ ಹೇಳಿಕೊಡು. ಈಗ ಕುಂಟೆಬಿಲ್ಲೆ ಅಂಕಣ ಬರೆದಾಯ್ತು, ಮುಂದೇನು ಮಾಡುವುದು?

**ಪ್ರಮೀಳ :** ಕಿಶೋರ, ಮೊದಲು ಆಟದ ನಿಯಮ, ಆಟವಾಡುವ ವಿಧಾನ ತಿಳಿದುಕೋ.

**ಅಜ್ಜ :** ಚೌಕದೊಳಗೆ ಎಸೆಯುವ ನಿನ್ನ ಬಿಲ್ಲೆ ಅಂಕಣದೊಳಗಿನ ಯಾವುದೇ ಚೌಕದ ಗೆರೆ ಮೇಲೆ ಬಿದ್ದರೂ ನೀನು ಔಟ್ ಆದಂತೆ. ಅಂದರೆ ಆಗ ಇನ್ನೊಬ್ಬ ಆಟಗಾರರ ಸರದಿ. ಅದೇ ರೀತಿ ಎಲ್ಲಾ ಚೌಕಗಳಿಗೂ ಬಿಲ್ಲೆಯನ್ನು ತಳ್ಳುತ್ತಾ ಸಾಗುವಾಗಲೂ ಬಿಲ್ಲೆ ಗೆರೆಯ ಮೇಲೆ ನಿಲ್ಲಬಾರದು.

**ಪ್ರಮೀಳ :** ಮೊದಲ ಮೂರು ಚೌಕಗಳನ್ನು ಬಿಲ್ಲೆ ತಳ್ಳುತ್ತಾ ಸಾಗಿ, ಮೂರನೆಯ ಚೌಕದಿಂದ ಬಿಲ್ಲೆಯನ್ನು ಪಕ್ಕದ ಚೌಕಕ್ಕೆ ತಳ್ಳಿ, ಘಟ್ಟದ ಮನೆಗಳಲ್ಲಿ ಕಾಲು ಬಿಟ್ಟು ವಿಶ್ರಾಂತಿ ತೆಗೆದುಕೊಳ್ಳಬೇಕು. ಪಕ್ಕದ ಘಟ್ಟದ ಚೌಕದಿಂದ ಕುಂಟುತ್ತಾ ಬಿಲ್ಲೆಯನ್ನು ಹಿಂದಿನ ರೀತಿಯಲ್ಲಿ ತಳ್ಳುತ್ತಾ ಹೋಗಬೇಕು.

**ಅಜ್ಜ :** ಹೀಗೆ ಕುಂಟುವಾಗ ದೇಹದ ನಿಯಂತ್ರಣ ತಪ್ಪಿ ಮಡಿಸಿದ ಕಾಲನ್ನು ನೆಲಕ್ಕೆ ಊರಿದರೂ, ಕುಂಟುತ್ತಾ ಗೆರೆಯನ್ನು ತುಳಿದರೂ ಔಟ್ ಆದಂತೆ.

**ಪ್ರಮೀಳ :** ಕೊನೆಯ ಚೌಕಕ್ಕೆ ಬಂದ ಮೇಲೆ, ಅಲ್ಲಿಂದ ಬಿಲ್ಲೆಯನ್ನು ಅಂಕಣದಿಂದ ಹೊರಗೆ ತಳ್ಳಬೇಕು. ಅನಂತರ ಕೊನೆಯ ಚೌಕದಿಂದ ಹಾರಿ ಆ ಬಿಲ್ಲೆಯನ್ನು ತುಳಿಯಬೇಕು. ಅಲ್ಲಿಗೆ ಒಂದು ಸುತ್ತು ಮುಗಿದಂತೆ.

**ಅಜ್ಜ :** ಎಚ್ಚರವಿರಲಿ, ಹಾಗೆ ಕೊನೆಯ ಚೌಕದಿಂದ ಬಿಲ್ಲೆಯನ್ನು ತಳ್ಳಿದ ಮೇಲೆ ಅದನ್ನು ಹಾರಿ ತುಳಿಯದಿದ್ದರೆ ನೀನು ಔಟ್ ಆದಂತೆ. ಹಾಗಾಗಿ ಬಿಲ್ಲೆಯನ್ನು ತಳ್ಳುವಾಗ ಸ್ವಲ್ಪ ಹತ್ತಿರದಲ್ಲೇ ತಳ್ಳಿಕೊಂಡರೆ ಹಾರಿ ತುಳಿಯಲು ಸುಲಭ.

**ಕಿಶೋರ :** ಎಷ್ಟು ದೂರ ತಳ್ಳಿದರೂ, ನಾನು ಹಾರಿ ತುಳಿಯುವೆ! ಜಿಗಿಯುವುದೆಂದರೆ ನನಗೆ ತುಂಬಾ ಇಷ್ಟ. ಸರಿ, ಈಗ ನನಗೆ ಆಟದ ವಿಧಾನ, ನಿಯಮ ತಿಳಿಯಿತು. ಈಗ ಆಟ ಆಡಲೇ ಅಜ್ಜ?

**ಅಜ್ಜ :** ಸರಿ. ಮೊದಲು ಅಂಕಣದ ಮುಂದೆ ನಿಂತುಕೋ. ಬಿಲ್ಲೆಯನ್ನು ಬಲಭಾಗದ ಮೊದಲನೆಯ ಚೌಕಕ್ಕೆ ಎಸೆದು ಸೂಚನೆಯಂತೆ ಆಟ ಮುಂದುವರೆಸು.

*(ಅಜ್ಜನ ಸೂಚನೆಯಂತೆ ಕಿಶೋರ ಬಿಲ್ಲೆಯನ್ನು ಮೊದಲನೆ ಮನೆಗೆ ಎಸೆಯುವನು. ಕುಂಟುತ್ತಾ ಕಾಲಿನಿಂದ ಬಿಲ್ಲೆಯನ್ನು ಚೌಕದಿಂದ ಚೌಕಕ್ಕೆ ದೂಡುತ್ತಾ ಮೂರನೆಯ ಚೌಕದಿಂದ ಎಡಪಕ್ಕದ ನಾಲ್ಕನೆಯ ಚೌಕಕ್ಕೆ ದೂಡಿ, ವಿಶ್ರಾಂತಿಯ ಘಟ್ಟಗಳಲ್ಲಿ ಕಾಲೂರಿ ವಿಶ್ರಾಂತಿ ಪಡೆಯುವನು. ಮತ್ತೆ ಕುಂಟುತ್ತಾ ನಾಲ್ಕನೆಯ ಚೌಕದಿಂದ*

@KTBS NOT TO BE REPUBLISHED

*ಬಿಲ್ಲೆಯನ್ನು ದೂಡುತ್ತಾ ಐದು, ಆರನೆಯ ಚೌಕಕ್ಕೆ ಬಂದು ಅಲ್ಲಿಂದ ಹೊರಗೆ ದೂಡಿ, ಜಿಗಿದು ಬಿಲ್ಲೆಯನ್ನು ತುಳಿಯುವನು)*

**ಅಜ್ಜ** : ಭೇಷ್, ಕಿಶೋರ. ತುಂಬಾ ಚೆನ್ನಾಗಿ ಆಡಿದ್ದೀಯ! ಮೊದಲನೆಯ ಸುತ್ತು ಇಲ್ಲಿಗೆ ಮುಗಿಯಿತು.

**ಕಿಶೋರ** : ಅಬ್ಬಾ! ಅಂತೂ ಒಂದು ಸುತ್ತು ಮುಗೀತು. ಎಷ್ಟು ಖುಷಿ ಆಯ್ತು. ಜೊತೆಗೆ ಸುಸ್ತೂ ಆಯ್ತು!

**ಅಜ್ಜ** : ನೋಡಿದೆಯಾ? ದೇಹಕ್ಕೆ ವ್ಯಾಯಾಮ, ಮನಸ್ಸಿಗೆ ರಂಜನೆ ಪಡೆಯುವುದೇ ಈ ಆಟದ ಮುಖ್ಯ ಉದ್ದೇಶ.

**ಕಿಶೋರ** : ಮುಂದೆ ಹೇಗೆ ಆಡುವುದು?

**ಅಜ್ಜ** : ಹೀಗೆಯೇ ಎರಡನೆಯ ಚೌಕದಿಂದ ಆರಂಭಿಸಿ ಆಟವನ್ನು ಆರನೆಯ ಅಂಕಣದವರೆಗೂ ಮುಂದುವರಿಸಬೇಕು. ಮಧ್ಯೆ, ಸೂಚನೆ ತಪ್ಪಿದರೆ ಔಟಾದಂತೆ. ಆಗ ಇನ್ನೊಬ್ಬರು ತಮ್ಮ ಆಟವನ್ನು ಆರಂಭಿಸುತ್ತಾರೆ. ಹೀಗೇ ಸರದಿಯ ಮೇಲೆ ಆಡಿ, ಯಾರು ಮೊದಲಿಗೆ ಆಟವನ್ನು ಮುಗಿಸುತ್ತಾರೋ, ಅವರು ಗೆದ್ದಂತೆ. ಈ ಆಟವನ್ನು ಬೇರೆ ಬೇರೆ ಕಡೆಗಳಲ್ಲಿ ಇನ್ನೂ ವಿಭಿನ್ನ ರೀತಿಯಲ್ಲಿ ಆಡುತ್ತಾರೆ. ಇಂದಿಗೆ ಇಷ್ಟು ಸಾಕು. ಈಗ ಅಕ್ಕಳ ಗೆಳತಿ ಪದ್ಮ ಬಂದಿದ್ದಾಳೆ. ಅವರಿಬ್ಬರೂ ಆಡಲಿ, ನಾವು ನೋಡೋಣ, ಅಲ್ವೇ?

**ಕಿಶೋರ** : ಆಗಲಿ ಅಜ್ಜ.

(ಪ್ರಮೀಳ, ಪದ್ಮ ಕುಂಟೆಬಿಲ್ಲೆ ಆಡತೊಡಗಿದರು. ಕಿಶೋರ ಖುಷಿಯಿಂದ ಆಟವನ್ನು ನೋಡತೊಡಗಿದ.)

© KTBS NOT TO BE REPUBLISHED

## ಪದಗಳ ಅರ್ಥ

ವೈಖರಿ–ರೀತಿ, ಶೈಲಿ; ಆತುರ–ಅವಸರ; ಸಿದ್ಧ–ತಯಾರಾದ; ನಯ–ನುಣುಪು; ತಳ್ಳು–ದೂಡು, ನೂಕು; ಸುಸ್ತು–ದಣಿವು

## ಟಿಪ್ಪಣಿ

ಹೊರಾಂಗಣ ಆಟಗಳು – ಮೈದಾನದಲ್ಲಿ ಆಡುವ ಆಟಗಳು

ಒಳಾಂಗಣ ಆಟಗಳು – ಮನೆಯೊಳಗೆ ಕುಳಿತು ಆಡುವ ಆಟಗಳು

ಕುಂಟೆಬಿಲ್ಲೆ – ಒಂದು ಜನಪದ ಆಟ. ಕುಂಟೋಬಿಲ್ಲೆ, ಕುಂಟುಬಿಲ್ಲೆ ಎಂದೂ ಕರೆಯುವರು.

ಬಿಲ್ಲೆ – ಕುಂಟೆಬಿಲ್ಲೆ ಆಟಕ್ಕೆ ಬಳಸುವ ದುಂಡಾಗಿರುವ ವಸ್ತು, ಸಾಮಾನ್ಯವಾಗಿ ಹೆಂಚಿನ ಚೂರು, ತೆಳುವಾದ ಕಲ್ಲಿನ ತುಂಡು ಅಥವಾ ಮರದ ಬೀಜ.

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ಕಿಶೋರ ಏಕೆ ಅಳುತ್ತಿದ್ದ?

___

೨. ಕಿಶೋರ ಅಳುವ ಸದ್ದಿಗೆ ಯಾರು ಹೊರಗೆ ಬಂದರು?

___

೩. ಪ್ರಮೀಳ ಯಾವ ಆಟವನ್ನು ಆಡಲು ತಯಾರಾಗಿದ್ದಳು?

___

೪. ಬಿಲ್ಲೆ ಹೇಗಿರಬೇಕು?

___

೫. ಅಂಕಣದಲ್ಲಿ ವಿಶ್ರಾಂತಿಗಾಗಿ ಇರುವ ಎರಡು ಚೌಕಗಳಿಗೆ ಏನೆನ್ನುತ್ತಾರೆ?

___

@KTBS NOT TO BE REPUBLISHED

### ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಅಜ್ಜ ಆಡಿದ್ದ ಆಟಗಳು ಯಾವುವು?

___

___

೨. ಬಿಲ್ಲೆ ಎಸೆಯುವ ಬಗ್ಗೆ ಅಜ್ಜ ಏನೆಂದು ಹೇಳಿದರು?

___

___

೩. ಮೊದಲ ಮೂರು ಚೌಕಗಳನ್ನು ಬಿಲ್ಲೆ ತಳ್ಳುತ್ತಾ ಸಾಗಿದ ಅನಂತರ ಏನು ಮಾಡಬೇಕು?

________________________________

________________________________

೪. ಕೊನೆಯ ಚೌಕಕ್ಕೆ ಬಂದ ಮೇಲೆ ಏನು ಮಾಡಬೇಕೆಂದು ಪ್ರಮೀಳ ಹೇಳಿದಳು?

________________________________

________________________________

೫. ಕುಂಟೆಬಿಲ್ಲೆ ಆಟದ ಉದ್ದೇಶಗಳು ಯಾವುವು?

________________________________

________________________________

**ಇ) ಕೊಟ್ಟಿರುವ ಆಟಗಳನ್ನು ಒಳಾಂಗಣ ಹಾಗೂ ಹೊರಾಂಗಣ ಆಟಗಳಾಗಿ ವರ್ಗೀಕರಿಸಿ ಬರೆ.**

ಉದ್ದಿನ ಮೂಟೆ, ಚಿಣ್ಣಿದಾಂಡು, ಅಣ್ಣೆಕಲ್ಲು, ಚೌಕಾಬಾರಾ, ಕಲ್ಲೋಮಣ್ಣೋ, ಕಣ್ಣುಮುಚ್ಚಾಲೆ.

| ಒಳಾಂಗಣ ಆಟಗಳು | ಹೊರಾಂಗಣ ಆಟಗಳು |
|---|---|
| | |

@KTBS NOT TO BE REPUBLISHED

**ಈ) ಕುಂಟೆಬಿಲ್ಲೆ ಆಡುವ ವಿಧಾನವನ್ನು ಅನುಕ್ರಮವಾಗಿ ಬರೆ.**

* ಕೊನೆಯ ಚೌಕದಿಂದ ಬಿಲ್ಲೆಯನ್ನು ಹಾರಿ ತುಳಿಯುವುದು.
* ಅಂಕಣ ಬರೆಯುವುದು.
* ಮೊದಲ ಚೌಕಕ್ಕೆ ಬಿಲ್ಲೆ ಎಸೆಯುವುದು.

* ಘಟ್ಟದ ಚೌಕಗಳಲ್ಲಿ ವಿಶ್ರಾಂತಿ ಪಡೆದುಕೊಳ್ಳುವುದು.

______________________________

______________________________

______________________________

______________________________

**ಉ) ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆ.**

೧. ಸರದಿ ೨. ಕುಣಿದು ಕುಪ್ಪಳಿಸು ೩. ಪಾಲಿಸು ೪. ಅವಸರ


**ನಾನಾರ್ಥ :** ಒಂದು ಪದಕ್ಕೆ ಇರುವ ಬೇರೆ ಬೇರೆ ಅರ್ಥಗಳಿಗೆ ನಾನಾರ್ಥ ಎನ್ನುವರು.

ಉದಾ : ಕಳೆ – ಶೋಭೆ ಕಳೆ – ಬೇಡವಾದ ಸಸ್ಯ

**ಊ) ಕೊಟ್ಟಿರುವ ಪದಗಳಿಗೆ ನಾನಾರ್ಥಗಳನ್ನು ಬರೆ.**

೧. ಆಡು ೨. ಕಾಡು ೩. ಹೊಳೆ ೪. ಹರಿ ೫. ಕವಿ

**ಋ) ಚುಕ್ಕಿಗಳನ್ನು ಸೇರಿಸಿ ಕುಂಟೆಬಿಲ್ಲೆ ಅಂಕಣವನ್ನು ಪೂರ್ಣಗೊಳಿಸು.**



@KTBS NOT TO BE REPUBLISHED

## ಸಾಮರ್ಥ್ಯಾಧಾರಿತ ಚಟುವಟಿಕೆ

**ಅ) ಈ ವಾಕ್ಯಗಳಲ್ಲಿನ ಸೂಚನೆಗಳಿಗೆ ಅಡಿಗೆರೆ ಹಾಕು.**

**ಮಾದರಿ :** <u>ನಿಧಾನವಾಗಿ ನಡೆ</u>, ಇಲ್ಲವಾದರೆ ಬಿದ್ದು ಬಿಡುವೆ.

೧. ರಸ್ತೆ ದಾಟುವಾಗ ಎಡ ಬಲ ನೋಡಬೇಕು.

೨. ಗಲಾಟೆ ಮಾಡಬೇಡಿ, ಮಾಡಿದರೆ ಪಾಠ ಅರ್ಥವಾಗುವುದಿಲ್ಲ.

೩. ಆಟ ಆಡುವಾಗ ಎಚ್ಚರವಿರಲಿ, ಇಲ್ಲವಾದರೆ ಅಪಘಾತ ಆಗುವುದು.

೪. ಊಟ ಮಾಡುವಾಗ ಅವಸರ ಮಾಡಬಾರದು.

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪದಗಳನ್ನು ಓದು. ಉಚ್ಚಾರ ಮತ್ತು ಅರ್ಥ ವ್ಯತ್ಯಾಸ ಗಮನಿಸು.**

೧. ಅರಸು – ಹರಸು ೨. ಅಲ್ಲಿ – ಹಲ್ಲಿ ೩. ಉಳಿ – ಹುಳಿ

**ಆ) ಮಾದರಿಯಂತೆ ಬದಲಾಯಿಸು.**

**ಮಾದರಿ :** ಆಡೋದು – ಆಡುವುದು

೧. ಮಾಡೋದು –

೨. ಬಿಡೋದು –

೩. ಬರೆಯೋದು –

೪. ತಳ್ಳೋದು –

**ಇ) ಮಾದರಿಯಂತೆ ಬರೆ.**

**ಮಾದರಿ :** ಅವನು ಆಟ ಆಡಿದ – ಅವನು ಆಟ ಆಡಲಿಲ್ಲ.

೧. ಅವಳು ಹಾಡು ಹೇಳಿದಳು –

೨. ನಾಯಿ ಜೋರಾಗಿ ಬೊಗಳಿತು –

೩. ಶಿಕ್ಷಕರು ಶಾಲೆಗೆ ಬಂದರು –

೪. ಅಮ್ಮ ಅಡುಗೆ ಮಾಡಿದಳು –

೫. ಅಜ್ಜ ಕಥೆ ಹೇಳಿದರು –

@KTBS
NOT TO BE REPUBLISHED

## ಚಟುವಟಿಕೆ

೧. ವಿಭಿನ್ನ ರೀತಿಯ ಕುಂಟೆಬಿಲ್ಲೆ ಅಂಕಣಗಳನ್ನು ಸಂಗ್ರಹಿಸು. ಆಡುವ ವಿಧಾನಗಳನ್ನು ಕೇಳಿ ತಿಳಿ.

೨. ಗ್ರಾಮೀಣ ಆಟಗಳನ್ನು ಹಿರಿಯರಿಂದ ಕೇಳಿ ತಿಳಿ.

೩. ಚೌಕಾಬಾರಾ ಆಟಕ್ಕೆ ನೀನೇ ಸೂಚನೆಗಳನ್ನು ಬರೆ.



# ಪಾಠ ೧೬ ಮುಳುಗದ ಸೂರ್ಯ (ಪದ್ಯ)

A4J9P1

**ಸಾಮರ್ಥ್ಯ :** ಪದ್ಯದಲ್ಲಿನ ಮುಖ್ಯ ವಿಷಯ ಗುರುತಿಸುವುದು.

**ಪ್ರವೇಶ :** ಇಲ್ಲಿ ಕವಿಯೊಬ್ಬರು ಸಾಧಕರ ಬಗ್ಗೆ ಬರೆದಿದ್ದಾರೆ. ಆ ಸಾಧಕರ ಬಗ್ಗೆ ತಿಳಿ. ಜೊತೆಗೆ ಅವರ ಸಾಧನೆಯನ್ನು ಇತರರೊಂದಿಗೆ ಹಂಚಿಕೊ.

ಅಂಧರ ಬಾಳಿನ ಸುಂದರ ಚಂದಿರ
ಗದುಗಿನ ಗವಾಯಿ ಗಿರಿ ಶಿಖರ
ಬೆಟ್ಟದಾಚೆ ತಾ ಬೆಳೆದು ನಿಂತನು
ಪುಟ್ಟರಾಜ ಕವಿ ಪ್ರಭಾಕರ



ಕಣ್ಣುಗಳಿದ್ದೂ ಇಲ್ಲದ ಹಾಗೆ
ಬದುಕುತ್ತಿರುವರು ಹಲವು ಜನ
ಇರದೇ ಇದ್ದರು ಇದ್ದಂತಿಹರು
ಸಾಧಕರಾಗಿ ಕೆಲವು ಜನ

ಕಟ್ಟಿ ಬೆಳೆಸಿ ತಾ ಹುಟ್ಟುಹಾಕಿದ
ಗಾನಯೋಗಿಯು ಸ್ವರಲೋಕ
ಸಾವಿರ ಸಾವಿರ ಅಂಧ ಮಕ್ಕಳಿಗೆ
ಸಜ್ಜಾಯಿತು ಈ ಭೂಲೋಕ

ಬರೆದರು ನಾಟಕ ಪುರಾಣ ಚರಿತೆ
ಅಳೆಯಲಿಕ್ಕಾಗದು ಪಾಂಡಿತ್ಯ
ಸೂಸುತ್ತಿರುವುದು ಎಲ್ಲೆಡೆ ಸೌರಭ
ಇವರದೆ ಆದ ಸಾಹಿತ್ಯ

©KTBS NOT TO BE REPUBLISHED

ಹಕ್ಕಿಗಳುಲಿದವು ನಲಿದವು ಒಡನೆ
ಕಿನ್ನರಿ ನುಡಿಸಲು ತನ್ನೊಳಗೆ
ರಾಜ ರಾಜ ಕವಿ ಮಹಾರಾಜ
ಮುಳುಗದ ಸೂರ್ಯ ಧರೆಯೊಳಗೆ

– ಪ.ಗು.ಸಿದ್ದಾಪುರ

## ಪದಗಳ ಅರ್ಥ

ಅಂಧ–ಕುರುಡ; ಉಲಿ–ದನಿ; ಧರೆ–ಭೂಮಿ; ಪ್ರಭಾಕರ–ಸೂರ್ಯ; ಸಜ್ಜು–ಸಿದ್ಧ; ಪಾಂಡಿತ್ಯ–ವಿದ್ವತ್ತು; ಸೂಸು–ಹರಡು; ಸೌರಭ–ಪರಿಮಳ; ಒಡನೆ–ಕೂಡಲೆ; ಗವಾಯಿ–ಹಾಡುಗಾರ

## ಟಿಪ್ಪಣಿ

ಕಿನ್ನರಿ – ಒಂದು ಬಗೆಯ ತಂತಿ ವಾದ್ಯ
ಶಿಖರ – ಬೆಟ್ಟ ಅಥವಾ ಗೋಪುರದ ತುದಿ
ಸಾಧಕರು – ವಿಶಿಷ್ಟ ಸಾಧನೆ ಮಾಡಿದವರು
ಸಾಹಿತ್ಯ – ಕಾವ್ಯ, ನಾಟಕ ಮುಂತಾದ ಭಾಷಿಕ ರಚನೆ
ಮುಳುಗದ ಸೂರ್ಯ – ಮರಣ ಹೊಂದಿದರೂ ತಾನು ಮಾಡಿದ ಕಾರ್ಯದಿಂದ ಜನಮನದಲ್ಲಿ ಉಳಿಯುವ ವ್ಯಕ್ತಿ

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಗದುಗಿನ ಗವಾಯಿಯವರು ಯಾರ ಬಾಳಿನ ಚಂದಿರ?

_______________________________________________

೨. ಗವಾಯಿಯವರು ಏನನ್ನು ಕಟ್ಟಿ ಬೆಳೆಸಿದರು?

_______________________________________________

೩. ಕವಿ ಮುಳುಗದ ಸೂರ್ಯ ಎಂದು ಯಾರನ್ನು ಕರೆದಿದ್ದಾರೆ?

_______________________________________________

© KTBS NOT TO BE REPUBLISHED

## ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಗವಾಯಿಯವರು ಮಾಡಿದ ಸಾಧನೆಗಳು ಯಾವುವು?

________________________________________

________________________________________

೨. ಭೂ ಲೋಕ ಸ್ವರ್ಗ ಲೋಕವಾದುದು ಹೇಗೆಂದು ಕವಿ ಹೇಳಿದ್ದಾರೆ?

________________________________________

________________________________________

## ಇ) ಈ ಅಪೂರ್ಣ ಸಾಲುಗಳನ್ನು ಪೂರ್ಣಗೊಳಿಸು.

೧. ಅಂಧರ ಬಾಳಿನ ____________________

೨. ಬೆಟ್ಟದಾಚೆ ತಾ ____________________

೩. ಹಕ್ಕಿಗಳುಲಿದವು ____________________

೪. ಇರದೇ ಇದ್ದರು ____________________

@KTBS NOT TO BE REPUBLISHED

## ಈ) ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳದಲ್ಲಿ ಸರಿಯಾದ ಪದವನ್ನು ಆರಿಸಿ ತುಂಬು.

೧. ಕಣ್ಣುಗಳಿದ್ದೂ ಇಲ್ಲದ ಹಾಗೆ ಬದುಕುತ್ತಿರುವರು ____________
(ಹಲವು ಜನ, ಬಹಳ ಜನ, ಎಲ್ಲ ಜನ)

೨. ಹಕ್ಕಿಗಳುಲಿದವು ನಲಿದವು ಒಡನೆ ಕಿನ್ನರಿ ನುಡಿಸಲು ____________
(ನಿನ್ನೊಳಗೆ, ನಮ್ಮೊಳಗೆ, ತನ್ನೊಳಗೆ)

೩. ಬರೆದರು ನಾಟಕ, ಪುರಾಣ, ಚರಿತೆ ಅಳೆಯಲಿಕ್ಕಾಗದು ____________
(ಸಾಹಿತ್ಯ, ಸಾಂಗತ್ಯ, ಪಾಂಡಿತ್ಯ)

೪. ಬೆಟ್ಟದಾಚೆ ತಾ ಬೆಳೆದು ನಿಂತನು ಪುಟ್ಟರಾಜ ಕವಿ ____________
(ಸುಧಾಕರ, ಪ್ರಭಾಕರ, ಮನೋಹರ)

## ಸಾಮರ್ಥ್ಯಾಧಾರಿತ ಅಭ್ಯಾಸ

**ಅ) ಈ ಪಠ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.**

ಪುಟ್ಟರಾಜರು ೧೯೧೪ ಮಾರ್ಚ್ ೩ರಂದು ಹಾವೇರಿ ತಾಲ್ಲೂಕಿನ ದೇವಗಿರಿಯಲ್ಲಿ ಜನಿಸಿದರು. ತಂದೆ ರೇವಣ್ಣಯ್ಯ, ತಾಯಿ ಸಿದ್ದಮ್ಮ. ಪುಟ್ಟರಾಜರು ಚಿಕ್ಕಂದಿನಲ್ಲೇ ಕಣ್ಣುಬೇನೆಯಿಂದ ದೃಷ್ಟಿ ಕಳೆದುಕೊಂಡರು. ಗುರು ಪಂಚಾಕ್ಷರಿ ಗವಾಯಿಗಳಲ್ಲಿ ಸಂಗೀತ ಶಿಕ್ಷಣ ಪಡೆದು ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದರು. ಸಂಗೀತದ ಜೊತೆಗೆ ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೂ ಗಣನೀಯ ಸೇವೆ ಮಾಡಿದರು.

೧. ಪುಟ್ಟರಾಜರು ಎಲ್ಲಿ ಜನಿಸಿದರು?

______________________________

೨. ಪುಟ್ಟರಾಜರು ದೃಷ್ಟಿ ಕಳೆದುಕೊಂಡದ್ದು ಹೇಗೆ?

______________________________

೩. ಪುಟ್ಟರಾಜರು ಸೇವೆ ಸಲ್ಲಿಸಿದ ಕ್ಷೇತ್ರಗಳು ಯಾವುವು?

______________________________

©KTBS NOT TO BE REPUBLISHED

## ಭಾಷಾಭ್ಯಾಸ ಚಟುವಟಿಕೆ

**ಅ) ಮಾದರಿಯಂತೆ ಬರೆ.**

**ಮಾದರಿ:** ನುಡಿ–ನುಡಿದರು

ಬರೆ – ______________

ನಡೆ – ______________

ನಲಿ – ______________

## ಭಾಷಾ ಚಟುವಟಿಕೆ

**ಅ) ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆ.**

೧. ಚಂದಿರ : ______________ ______________

೨. ಸೂರ್ಯ : ______________ ______________

೩. ಧರೆ : ______________ ______________

**ಆ) ಅರ್ಥದ ಆಧಾರದಲ್ಲಿ ಗುಂಪಿಗೆ ಸೇರದ ಪದ ಗುರುತಿಸಿ ಬರೆ.**

೧. ನಾಟಕ, ಚರಿತ್ರೆ, ಚಿತ್ರ, ಪುರಾಣ : ______________

೨. ಬೆಟ್ಟ, ನದಿ, ಪರ್ವತ, ಗಿರಿ : ______________

೩. ಮಂತ್ರಿ, ರಾಜ, ದೊರೆ, ಅರಸ : ______________

೪. ಗಾಯಕ, ಶಿಲ್ಪಿ, ಹಾಡುಗಾರ, ಗವಾಯಿ : ______________

**ಇ) ಕೊಟ್ಟಿರುವ ವಾಕ್ಯಗಳಲ್ಲಿ ಎರಡು ಸಲ ಬಂದಿರುವ ಪದಗಳಿಗೆ ಅಡಿಗೆರೆ ಹಾಕು.**

೧. ಗವಾಯಿಗಳು ಸಾವಿರ ಸಾವಿರ ಅಂಧ ಮಕ್ಕಳಿಗೆ ಆಧಾರವಾದರು.

೨. ರಾಜರಾಜ ಕವಿ ಮಹಾರಾಜರೆಂದು ಪುಟ್ಟರಾಜರನ್ನು ಕವಿ ಕರೆದಿರುವರು.

೩. ಈ ಮಣ್ಣಿನ ಕಣಕಣದಲ್ಲೂ ಶೌರ್ಯ ಅಡಗಿದೆ.

**ಈ) ಈ ವಾದ್ಯಗಳನ್ನು ಗುರುತಿಸಿ ಹೆಸರು ಬರೆಯಿರಿ.**

______________ ______________ ______________ ______________

## ಚಟುವಟಿಕೆ

೧. ಸಂಗೀತ ಸಾಧಕರ ಬಗ್ಗೆ ಹಿರಿಯರಿಂದ ಕೇಳಿ ತಿಳಿ.

@KTBS NOT TO BE REPUBLISHED